## ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ

(ನೊ.ಸಂ: ಜೆ.ಆರ್.ಬಿ/ಆರ್.ಜಿ.ಎಸ್/ಸೌಕಾ/28/1706/2011-12/ದಿನಾಂಕ: 19.03.2012.
ನಂ.277/27, 59ನೇ ಅಡ್ಡ ರಸ್ತೆ, ವಾಟಾಳ್ ನಾಗರಾಜ್ ರಸ್ತೆ, 3ನೇ ಬ್ಲಾಕ್,ರಾಜಾಜಿನಗರ, ಬೆಂಗಳೂರು-560 010.
ಇ-ಮೇಲ್ ಐಡಿ nkkcredit@gmail.com./info@nkkcredit.com

### ಸಾಮಾನ್ಯ ಸಭೆ ನೋಟೀಸು

ದಿನಾಂಕ 31.03.2025 ಕ್ಕೆ ಪೂರ್ಣಗೊಂಡ 2024-25ನೇ ಸಾಲಿನ 13ನೇ ವಾರ್ಷಿಕ ಸಾಮಾನ್ಯ ಸಭೆಯು ನಮ್ಮ ಸಹಕಾರಿಯ ಅಧ್ಯಕ್ಷರಾದ ಶ್ರೀ.ವಿ.ಬಿ.ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 01.06.2025ರ ಭಾನುವಾರ ಬೆಳಿಗ್ಗೆ 11-30 ಘಂಟೆಗೆ "ಪೋಲಿಸ್ ಭವನ", ಕರ್ನಾಟಕ ರಾಜ್ಯ ನಿವೃತ್ತ ಪೋಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಜಿ.ಟಿ. ಮಾಲ್ ಎದುರುಗಡೆ, ಮಾಗಡಿ ಮುಖ್ಯರಸ್ತೆ, ಚೋಳೂರುಪಾಳ್ಯ, ರಾಜಾಜಿನಗರ, ಬೆಂಗಳೂರು-560 023 (ದೂರವಾಣಿ: 080-23389797, ಮೊಬೈಲ್: 9606704500), ಇಲ್ಲಿ ಈ ಕೆಳಕಂಡ ವಿಷಯಗಳನ್ನು ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರಿದೆ.

**ಕಾರ್ಯಕಲಾಪಗಳು**

| | |
|---|---|
| 1. | ಪ್ರಾರ್ಥನೆ. |
| 2. | ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು. |
| 3. | ವರದಿ ಸಾಲಿನಲ್ಲಿ ಮರಣ ಹೊಂದಿದ ಸಹಕಾರಿ ಸದಸ್ಯರಿಗೆ ಶ್ರದ್ಧಾಂಜಲಿ. |
| 4. | ಅಧ್ಯಕ್ಷರಿಂದ ಸ್ವಾಗತ ಭಾಷಣ. |
| 5. | ದಿನಾಂಕ: 01.09.2024ರಂದು ನಡೆದ 2023-24ನೇ ಸಾಲಿನ ಹನ್ನೆರಡನೇಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು. |
| 6. | 2024-25ನೇ ಸಾಲಿನ ಆಡಳಿತ ಮಂಡಳಿ ವರದಿಯ ಮಂಡನೆ ಮತ್ತು ಅನುಮೋದನೆ. |
| 7. | 2024-25ನೇ ಸಾಲಿನ ಲೆಕ್ಕಪರಿಶೋಧಕರಿಂದ ಪರಿಶೀಲಿಸಲ್ಪಟ್ಟ ಲೆಕ್ಕ ಪತ್ರಗಳ ಪರಿಶೀಲನೆ ಮತ್ತು ಅಂಗೀಕರಿಸುವುದು. |
| 8. | 2024-25ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು. |
| 9. | 2024-25ನೇ ಸಾಲಿನಲ್ಲಿ ಅಂದಾಜು ವೆಚ್ಚಕ್ಕಿಂತ ಮೇಲ್ಪಟ್ಟು ವೆಚ್ಚವಾಗಿರುವುದನ್ನು ಅನುಮೋದಿಸುವುದು. |
| 10. | 2025-26 ಹಾಗೂ 2026-27ನೇ ಸಾಲಿಗೆ ಅಂದಾಜು ಆಯ-ವ್ಯಯವನ್ನು ಅನುಮೋದಿಸುವುದು. |
| 11. | 2025-26ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಹಾಗೂ ಸಂಭಾವನೆಯನ್ನು ನಿಗಧಿಪಡಿಸುವುದು. |
| 12. | ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ಕೈಗೊಂಡ ಕ್ರಮದ ಪರಿಶೀಲನೆ. |
| 13. | ವರದಿ ವರ್ಷದಲ್ಲಿ ಸದಸ್ಯರನ್ನು ನೇಮಿಸಿಕೊಂಡಿದ್ದು ಮತ್ತು ಸದಸ್ಯತ್ವ ಹಿಂಪಡೆದ ಬಗೆಗಿನ ಸಂಕ್ಷಿಪ್ತ ವರದಿ. |
| 14. | ಸಹಕಾರಿಗೆ ಮುಖ್ಯಕಾರ್ಯನಿರ್ವಹಣಾಧಿಕಾರಿ, ವ್ಯವಸ್ಥಾಪಕರು, ಆಂತರಿಕ ಲೆಕ್ಕಪರಿಶೋಧಕರು ಮತ್ತು ಆರ್ಥಿಕ ಸಲಹೆಗಾರರ ಸೇವಾವಧಿಯ ಮುಂದುವರಿಕೆಯ ಅನುಮೋದನೆ. |
| 15. | ಇತರ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ವರದಿ. |
| 16. | ಕಟ್ ಬಾಕಿ ಸಾಲಗಳನ್ನು ಏಕ ಕಂತಿನಲ್ಲಿ ತೀರುವಳಿ ಮಾಡಿರುವ ಕ್ರಮವನ್ನು ಅನುಮೋದಿಸುವುದು. |
| 17. | ಆಡಳಿತ ಮಂಡಳಿ ನಿರ್ದೇಶಕರುಗಳು ಗುಜರಾತ್ ರಾಜ್ಯಕ್ಕೆ ಅಧ್ಯಯನ ಪ್ರವಾಸ ಮಾಡಿರುವುದನ್ನು ಸ್ಥಿರೀಕರಿಸಿ ಅನುಮೋದಿಸುವುದು. |
| 18. | ಸಹಕಾರಿಯ 'ಎನ್.ಕೆ.ಕೆ. ಚಾರಿಟೇಬಲ್ ಟ್ರಸ್ಟ್' ಸ್ಥಾಪನೆ ಮತ್ತು ಜಂಟಿ ಸಹಭಾಗಿತ್ವದ "ಸಹೋದ್ಯಮಗಳಲ್ಲಿ" ಭಾಗವಹಿಸುವಿಕೆ ಕುರಿತು ಕ್ರಮವಾಗದಿರುವ ಬಗ್ಗೆ ಮಾಹಿತಿ. |
| 19 | ಸಹಕಾರಿಯ ಹಳೇ ವಾಹನವನ್ನು ಮಾರಾಟ ಮಾಡಿ ಹೊಸ ವಾಹನವನ್ನು ಖರೀದಿಸಿದ ಬಗ್ಗೆ ಮಾಹಿತಿ. |
| 20 | ಸಹಕಾರಿಯು ಸ್ವಂತ ಕಟ್ಟಡ ಹೊಂದುವ ಉದ್ದೇಶದಿಂದ ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ 29.6*45 ಅಡಿ ಅಳತೆಯ ಮೂಲೆ ನಿವೇಶನದ ಹಳೇ ಕಟ್ಟಡವನ್ನು ಖರೀದಿಸುವ ತೀರ್ಮಾನವನ್ನು ಅನುಮೋದಿಸುವುದು. |
| 21 | ಸಹಕಾರಿಗೆ ಸ್ವಂತ ನಿವೇಶನ/ಕಟ್ಟಡ ಖರೀದಿ ಬಾಬ್ತು ಸಹಕಾರಿಯ ಮೀಸಲು ನಿಧಿ, ಕಾರ್ಯಾಚರಣಾ ಮೀಸಲು ನಿಧಿ ಮತ್ತು ಸಾಮಾನ್ಯ ಕ್ಷೇಮಾಭಿವೃದ್ಧಿ ನಿಧಿಗಳನ್ನು ಹಾಗೂ ಕಟ್ಟಡ ನಿಧಿಗಳನ್ನು ನಿಯಮಾನುಸಾರ ಉಪಯೋಗಿಕೊಳ್ಳಲು, ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿಯಿಂದ ಅನುಮತಿ ಪಡೆಯಲು ಪ್ರಸ್ತಾವನೆಯನ್ನು ಕಳುಹಿಸಲು ಅನುಮೋದಿಸುವುದು. |
| 22 | ಅಧ್ಯಕ್ಷರ ಅನುಮತಿಯೊಂದಿಗೆ ಚರ್ಚಿಸಬಹುದಾದ ಇತರೇ ವಿಷಯಗಳು. |
| 23. | ವಂದನಾರ್ಪಣೆ. |

ಸ್ಥಳ: ಬೆಂಗಳೂರು-560 010. ಆಡಳಿತ ಮಂಡಳಿ ಅಪ್ಪಣೆ ಮೇರೆಗೆ

ದಿನಾಂಕ: 12-05-2025 ಸಹಿ/-

ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

| ವಿಶೇಷ ಸೂಚನೆಗಳು: | |
|---|---|
| 1. | ಮಾನ್ಯ ಸದಸ್ಯರು ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು ಇದ್ದಲ್ಲಿ ಮಹಾಸಭೆ ನಡೆಯುವ 5 ದಿನಗಳ ಮುಂಚಿತವಾಗಿ ಸಹಕಾರಿಗೆ ಲಿಖಿತ ಮೂಲಕ ತಲುಪಿಸತಕ್ಕದ್ದು. |
| 2. | ಮಾನ್ಯ ಸದಸ್ಯರು ಸಕ್ರೀಯ ಸದಸ್ಯತ್ವದ ಅರ್ಹತೆಯನ್ನು ಪಡೆಯಲು, ಸದಸ್ಯರು ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸಲು ಈ ಮೂಲಕ ಕೋರಲಾಗಿದೆ. ಒಂದು ವೇಳೆ ಈ ಕೆಳಕಂಡ ನಿಯಮಗಳನ್ನು ಪಾಲಿಸದಿದ್ದಲ್ಲಿ ವಾರ್ಷಿಕ ಮಹಾಸಭೆಗಳಲ್ಲಿ ಭಾಗವಹಿಸಲು ಹಾಗೂ ನಂತರದ ವರ್ಷಗಳಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಮತದಾನ ಮಾಡುವ ಅರ್ಹತೆಗಳಿಗೆ ವಂಚಿತರಾಗುತ್ತಾರೆ.<br>ಅ) ಸದಸ್ಯರು ಸದಸ್ಯತ್ವವನ್ನು ಹೊಂದುವಾಗ KYC ನಿರ್ದೇಶನದಂತೆ ಅವಶ್ಯಕ ದಾಖಲಾತಿಗಳನ್ನು ಒದಗಿಸಬೇಕು.<br>ಆ) ಸದಸ್ಯರು ಕನಿಷ್ಠ 5 ಶೇರುಗಳನ್ನು ಹೊಂದಿ, ಸಕ್ರೀಯ ಸದಸ್ಯತ್ವದ ಅರ್ಹತೆಯನ್ನು ಹೊಂದಿರಬೇಕು.<br>ಇ) ಸದಸ್ಯರು ಉಳಿತಾಯ ಖಾತೆಯನ್ನು ಹೊಂದಿ ಕನಿಷ್ಠ ರೂ. 1,000/- ಶಿಲ್ಕು ಹೊಂದಿರಬೇಕು.<br>ಈ) ಪ್ರತಿ ಹಣಕಾಸು ವರ್ಷದಲ್ಲಿ ಸದಸ್ಯರು ಕನಿಷ್ಠ ರೂ. 100/- ತಮ್ಮ ಠೇವಣಿಗಳ ಅಥವಾ ಉಳಿತಾಯದ ಮೇಲೆ ಬಡ್ಡಿ ಪಡೆದಿರಬೇಕು ಅಥವಾ ಸಹಕಾರಿಯಿಂದ ಪಡೆದ ಸಾಲಕ್ಕೆ ರೂ. 500/- ಬಡ್ಡಿಯನ್ನು ಪಾವತಿಸಿರಬೇಕು.<br>ಉ) ಪ್ರತಿ ಹಣಕಾಸು ವರ್ಷದಲ್ಲಿ ಒಂದು ಸಲವಾದರೂ ವ್ಯವಹಾರ ಮಾಡಿರಬೇಕು.<br>ಊ)ಹಿಂದಿನ 5 ಸಾಮಾನ್ಯ ಸಭೆಗಳ ಪೈಕಿ ಯಾವುದಾದರೂ 2 ಸಾಮಾನ್ಯ ಸಭೆಗಳಿಗೆ ಹಾಜರಾಗಿರತಕ್ಕದ್ದು.<br>ಊ)ಸಹಕಾರಿಗೆ ಸುಸ್ತಿದಾರರಾಗಿರಬಾರದು. |
| 3. | ಸಾಮಾನ್ಯ ಸಭೆಯ ವಾರ್ಷಿಕ ವರದಿ ಹಾಗೂ 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಮಾನ್ಯ ಸದಸ್ಯರುಗಳ ಇ-ಮೇಲ್‌ಗೆ ಕಳುಹಿಸಲಾಗಿದ್ದು, ಒಂದು ವೇಳೆ ಮಾನ್ಯ ಸದಸ್ಯರಿಗೆ ಪ್ರತಿಗಳು ಬೇಕಾದಲ್ಲಿ ಸಹಕಾರಿಯ ವ್ಯವಹಾರದ ವೇಳೆಯಲ್ಲಿ ದಿನಾಂಕ: 28-05-2025 ರಿಂದ ಪಡೆಯಬಹುದು. |
| 4. | ಸದಸ್ಯರು ತಮ್ಮ ವಿಳಾಸದಲ್ಲಿ ಬದಲಾವಣೆಯಾಗಿದ್ದಲ್ಲಿ, ಕೂಡಲೇ ಅದನ್ನು ಸಹಕಾರಿಗೆ ತಿಳಿಸಲು ಕೋರಿದೆ. |
| 5. | ಸದಸ್ಯರು ಸಾಮಾನ್ಯ ಸಭೆಗೆ ನಿಗದಿತ ಸಮಯಕ್ಕೆ ಸರಿಯಾಗಿ ಹಾಜರಾಗಲು ಕೋರಿದೆ. |
| 6. | ಸಹಕಾರಿಯಲ್ಲಿ ಇ-ಮೇಲ್/ಎಸ್‌ಎಮ್‌ಎಸ್ ನೋಂದಾಯಿಸದಿರುವ ಸದಸ್ಯರು ತಮ್ಮ ಇ-ಮೇಲ್ ಐಡಿ/ಎಸ್‌ಎಮ್‌ಎಸ್ ನಂಬರನ್ನು, ಈ ಕೂಡಲೇ ಸಹಕಾರಿಯ ಇ-ಮೇಲ್ ಐಡಿ nkkcredit@gmail.com/info@nkkcredit.com ಅಥವಾ ವಾಟ್ಸಾಪ್ ಮೊಬೈಲ್ ನಂ 94812 50036ಗೆ ಕಳುಹಿಸಲು ಕೋರಿದೆ. |
| 7. | ಸಹಕಾರಿಯು ತನ್ನ ವೆಬ್‌ಸೈಟ್ www.nkkcredit.com ಅನ್ನು ಹೊಂದಿದ್ದು, ಅದರ ಮುಖಾಂತರ ಎಲ್ಲಾ ಮಾಹಿತಿಯನ್ನು ಪಡೆಯಲು ಕೋರಿದೆ. |
| | ದಿನಾಂಕ: 01.06.2025ರ ಭಾನುವಾರ ಬೆಳಿಗ್ಗೆ 11.30 ಘಂಟೆಗೆ<br>ಸ್ಥಳ: "ಪೋಲಿಸ್ ಭವನ", ಕರ್ನಾಟಕ ರಾಜ್ಯ ನಿವೃತ್ತ ಪೋಲಿಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ,<br>ಜಿ.ಟಿ. ಮಾಲ್ ಎದುರುಗಡೆ, ಮಾಗಡಿ ಮುಖ್ಯರಸ್ತೆ, ಚೋಳೂರುಪಾಳ್ಯ, ರಾಜಾಜಿನಗರ, ಬೆಂಗಳೂರು-560 023,<br>(ದೂರವಾಣಿ: 080-23389797, ಮೊಬೈಲ್: 9606704500) |

## ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ,
## ರಾಜಾಜಿನಗರ, ಬೆಂಗಳೂರು-560 010.

| | |
|---|---|
| | ದಿನಾಂಕ: 01.06.2025ನೇ ಭಾನುವಾರ ಬೆಳಿಗ್ಗೆ 11-30 ಘಂಟೆಗೆ ನಡೆಯುವ ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ ಇದರ 13ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲಾಗುವ ವಿಷಯಗಳ ಮೇಲಿನ ಟಿಪ್ಪಣಿಗಳು. |
| ವಿಷಯ 5:<br><br>ಟಿಪ್ಪಣಿ: | ದಿನಾಂಕ 01.09.2024 ರಂದು ನಡೆದ ಸಹಕಾರಿಯ ಹನ್ನೆರಡನೇಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು.<br><br>ದಿನಾಂಕ 01.09.2024 ರಂದು ನಡೆದ ಸಹಕಾರಿಯ ಹನ್ನೆರಡನೇಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ ಹಾಗೂ ಸದರಿ ನಡವಳಿಗಳನ್ನು ಓದಿ ದಾಖಲು ಮಾಡಲು ಸಾಮಾನ್ಯ ಸಭೆಯ ಮುಂದೆ ಮಂಡಿಸಲಾಗಿದೆ. (ಪುಟ ರಿಂದ ರವರೆಗೆ) |
| ವಿಷಯ 6:<br><br>ಟಿಪ್ಪಣಿ: | 2024-25ನೇ ಸಾಲಿನ ಸಹಕಾರಿಯ ಆಡಳಿತ ಮಂಡಳಿ ವರದಿಯ ಮಂಡನೆ ಮತ್ತು ಅನುಮೋದನೆ.<br><br>2024-25ನೇ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ಇದರೊಂದಿಗೆ ಲಗತ್ತಿಸಿ ಅನುಮೋದನೆಗಾಗಿ ಮಂಡಿಸಲಾಗಿದೆ. (ಪುಟ ರಿಂದ ರವರೆಗೆ) |
| ವಿಷಯ 7:<br><br>ಟಿಪ್ಪಣಿ: | 2024-25ನೇ ಸಾಲಿನ ಲೆಕ್ಕ ಪರಿಶೋಧಕರಿಂದ ಪರಿಶೀಲಿಸಲ್ಪಟ್ಟ ಲೆಕ್ಕ ಪತ್ರದ ಪರಿಶೀಲನೆ ಹಾಗೂ ಅಂಗೀಕಾರ<br><br>2024-25ನೇ ಸಾಲಿನ ಸಹಕಾರಿಯ ಲೆಕ್ಕ ಪರಿಶೋಧಕರಿಂದ ಪರಿಶೀಲಿಸಲ್ಪಟ್ಟ ಲೆಕ್ಕ ಪತ್ರದ ಪ್ರತಿಗಳನ್ನು ತಮಗೆ ಈಗಾಗಲೇ ಇ-ಮೇಲ್ ಮೂಲಕ ಕಳುಹಿಸಿಕೊಡಲಾಗಿದೆ. ಸದರಿ ಪರಿಶೀಲಿಸಲ್ಪಟ್ಟ ಲೆಕ್ಕ ಪತ್ರಗಳ ಪ್ರತಿಯನ್ನು ಇದರೊಡನೆ ಲಗತ್ತಿಸಲಾಗಿದೆ. ಪರಿಶೀಲನೆಗಾಗಿ ಹಾಗೂ ಅಂಗೀಕಾರಕ್ಕೋಸ್ಕರ ಸಾಮಾನ್ಯ ಸಭೆಯ ಮುಂದೆ ಮಂಡಿಸಲಾಗಿದೆ.(ಪುಟ ರಿಂದ ರವರೆಗೆ) |
| ವಿಷಯ 8:<br><br>ಟಿಪ್ಪಣಿ: | 2024-25ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು<br><br>ಸಹಕಾರಿಯು 2024-25ನೇ ಸಾಲಿನಲ್ಲಿ ರೂ. 1,47,04,789.74 ಗಳ ನಿವ್ವಳ ಲಾಭವನ್ನು ಗಳಿಸಿದ್ದು, ಅದರ ವಿಲೇವಾರಿಯ ಪಟ್ಟಿಯನ್ನು ಇದರೊಡನೆ ಲಗತ್ತಿಸಲಾಗಿದೆ. ಸದರಿ ನಿವ್ವಳ ಲಾಭದ ವಿಲೇವಾರಿಯನ್ನು ಮತ್ತು ಶಾಸನಬದ್ಧ ನಿಧಿಗಳನ್ನು ಕಳೆದು ಉಳಿದ ಲಾಭದಲ್ಲಿ ಸದಸ್ಯರಿಗೆ ಶೇ. 11.00 ರಂತೆ ಡಿವಿಡೆಂಡನ್ನು ಪಾವತಿಸುವ ಆಡಳಿತ ಮಂಡಳಿಯ ಶಿಫಾರಸ್ಸನ್ನು ಅನುಮೋದಿಸುವುದಕ್ಕೋಸ್ಕರ ವಿಷಯವನ್ನು ಸಾಮಾನ್ಯ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾಗಿದೆ. ( ಪುಟ ) |
| ವಿಷಯ 9:<br><br>ಟಿಪ್ಪಣಿ: | 2024-25ನೇ ಸಾಲಿನಲ್ಲಿ ಅಂದಾಜು ವೆಚ್ಚಕ್ಕಿಂತ ಮೇಲ್ಪಟ್ಟು ವೆಚ್ಚವಾಗಿರುವುದನ್ನು ಅನುಮೋದಿಸುವುದು<br><br>2024-25ನೇ ಸಾಲಿನಲ್ಲಿ ಅಂದಾಜು ವೆಚ್ಚಕ್ಕಿಂತ ರೂ. 5,03,346.23 ಹೆಚ್ಚಿಗೆ ಖರ್ಚಾಗಿರುವುದನ್ನು ಹಾಗೂ ಇತರೇ ಆದಾಯ ಖಾತೆಯಲ್ಲಿ ಅಂದಾಜು ಆದಾಯಕ್ಕಿಂತ ರೂ. 29,14,149.00 ಹೆಚ್ಚಿಗೆ ಆದಾಯ ಬಂದಿರುವುದನ್ನು ಅನುಮೋದಿಸಲು ವಿಷಯವನ್ನು ಸಾಮಾನ್ಯ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾಗಿದೆ. ( ಪುಟ ರಿಂದ ). |
| ವಿಷಯ 10:<br><br>ಟಿಪ್ಪಣಿ: | 2025-26 ಹಾಗೂ 2026-27ನೇ ಸಾಲಿನ ಅಂದಾಜು ಆಯ-ವ್ಯಯವನ್ನು ಅನುಮೋದಿಸುವುದು.<br><br>2025-26 ಹಾಗೂ 2026-27ನೇ ಸಾಲಿನ ಅಂದಾಜು ಆಯ-ವ್ಯಯಗಳ ಪಟ್ಟಿಯನ್ನು ಪರಿಶೀಲನೆಗಾಗಿ ನೀಡಲಾಗಿದೆ. ಸದರಿ ಅಂದಾಜು ಆಯ-ವ್ಯಯಗಳನ್ನು ಅನುಮೋದಿಸುವ ಸಲುವಾಗಿ ಸಾಮಾನ್ಯ ಸಭೆಯ ಮುಂದೆ ಮಂಡಿಸಲಾಗಿದೆ.(ಪುಟ ರಿಂದ ವರೆಗೆ) |
| ವಿಷಯ 11:<br><br>ಟಿಪ್ಪಣಿ: | 2025-26ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಹಾಗೂ ಸಂಭಾವನೆಯನ್ನು ನಿಗಧಿಪಡಿಸುವುದು.<br><br>ಪ್ರಸ್ತುತ, 2024-25ನೇ ಸಾಲಿನ ಲೆಕ್ಕ ಪರಿಶೋಧಕರಾದ ಶ್ರೀಯುತ C.M. ಮಹಾದೇವ್, ಚಾರ್ಟರ್ಡ್ ಅಕೌಂಟೆಂಟ್ಸ್, ಮೆಂಬರ್‌ಶಿಪ್ ನಂ. ಬಿಜಿಯು 140, ರವರಿಗೆ ರೂ. 1,00,000+18% GST ಗಳ ವಾರ್ಷಿಕ ಸಂಭಾವನೆಯನ್ನು ನೀಡಲಾಗಿತ್ತು. ಸದರಿ ಕಂಪನಿ 1ವರ್ಷ ಲೆಕ್ಕಪರಿಶೋಧನೆ ಮಾಡಿರುವುದರಿಂದ ಮುಂದಿನ ವರ್ಷಕ್ಕೆ ಲೆಕ್ಕಪರಿಶೋಧನೆಗೆ ಪರಿಗಣಿಸಲು ಅರ್ಹರಿರುತ್ತಾರೆ. ಸರ್ಕಾರವು ಲೆಕ್ಕ ಪರಿಶೋಧಕರನ್ನು ನೇಮಿಸಿಕೊಳ್ಳಲು ಶ್ರೇಣಿಗಳನ್ನು ನಿಗದಿಪಡಿಸಿದೆ. ಆದುದರಿಂದ, ಈ ಕೆಳಕಂಡ ಅನುಮೋದಿತ ಲೆಕ್ಕಪರಿಶೋಧಕರ |

| | |
|---|---|
| | ಪಟ್ಟಿಯಿಂದ ಒಬ್ಬರನ್ನು ನೇಮಿಸಿಕೊಂಡು ಸಂಭಾವನೆಯನ್ನು ನಿಗದಿಪಡಿಸಬಹುದಾಗಿದೆ. |
| | 1. ಶ್ರೀಯುತ C.M. ಮಹಾದೇವ್, ಚಾರ್ಟರ್ಡ್ ಅಕೌಂಟೆಂಟ್ಸ್, ಮೆಂಬರ್‌ಶಿಪ್ ನಂ. ಬಿಜೆಯು 140.<br>2. ಮೆ// ಯೋಗೀಶ ಅಂಡ್ ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್‌ಮೆಂಬರ್‌ಶಿಪ್ ನಂ. ಬಿಜೆಯು 218466.<br>3. ಮೆ// ದೊಡ್ಡಮನಿ ಅಂಡ್ ಅಸೋಸಿಯೇಟ್ಸ್ ಚಾರ್ಟರ್ಡ್ ಅಕೌಂಟೆಂಟ್ಸ್ ರಿಜಿಸ್ಟರ್ ನಂ. 014812S<br>ವಿಷಯವನ್ನು ಅನುಮೋದನೆಗಾಗಿ ಮಂಡಿಸಲಾಗಿದೆ. |
| ವಿಷಯ 12:<br><br>ಟಿಪ್ಪಣಿ: | ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ಕೈಗೊಂಡ ಕ್ರಮದ ಪರಿಶೀಲನೆ.<br><br>ಅ) ಶ್ರೀಯುತ ಸಿ.ವಿ.ಚಂದ್ರಶೇಖರ್, ನಿರ್ದೇಶಕರು, ಇವರಿಗೆ ಹಾಗೂ ಇವರ ಸಂಬಂಧಿಕರಿಗೆ ಭದ್ರತೆ ಸಾಲಗಳನ್ನು ನೀಡಲಾಗಿದೆ, ಮತ್ತು 31.03.2025ಕ್ಕೆ ಈ ಸಾಲಗಳು ಸುಸ್ತಿಯಾಗಿರುವುದಿಲ್ಲ.<br>ಆ) ಶ್ರೀಯುತ ಎಸ್. ಎಮ್.ಚಂದ್ರಶೇಖರ್, ನಿರ್ದೇಶಕರು, ಅವರ ಸಂಸ್ಥೆ M/s Aishwarya Beauty & Healthಗೆ ಭದ್ರತೆ ಸಾಲವನ್ನು ನೀಡಲಾಗಿದೆ ಮತ್ತು 31.03.2025ಕ್ಕೆ ಈ ಸಾಲವು ಸುಸ್ತಿಯಾಗಿರುವುದಿಲ್ಲ.<br>ಇ) ಶ್ರೀಮತಿ ಅನ್ನಪೂರ್ಣ ಪಾಟೀಲ್, ನಿರ್ದೇಶಕರು, ಇವರಿಗೆ ಭದ್ರತೆ ಸಾಲ ನೀಡಲಾಗಿದೆ ಮತ್ತು 31.03.2025ಕ್ಕೆ ಈ ಸಾಲ ಸುಸ್ತಿಯಾಗಿರುವುದಿಲ್ಲ. |
| ವಿಷಯ 13:<br><br>ಟಿಪ್ಪಣಿ: | ವರದಿ ವರ್ಷದಲ್ಲಿ ಸದಸ್ಯರನ್ನು ನೇಮಿಸಿಕೊಂಡಿದ್ದು ಮತ್ತು ಸದಸ್ಯತ್ವ ಹಿಂಪಡೆದ ಬಗೆಗಿನ ಸಂಕ್ಷಿಪ್ತ ವರದಿ.<br><br>ಪ್ರಸ್ತುತ ಸಾಲಿನಲ್ಲಿ ಒಟ್ಟು 187 ಸದಸ್ಯರನ್ನು ಹೊಸದಾಗಿ ಸೇರಿಸಿಕೊಳ್ಳಲಾಗಿದೆ. ಹೊಸ ಸದಸ್ಯರಿಂದ ಮತ್ತು ಹಾಲಿ ಸದಸ್ಯರಿಂದ ಹೆಚ್ಚುವರಿಯಾಗಿ ರೂ. 22.43 ಲಕ್ಷಗಳಷ್ಟು ಷೇರು ಮೊತ್ತ ಜಮಾ ಆಗಿದ್ದು, 53 ಸದಸ್ಯರು ತಮ್ಮ ಸದಸ್ಯತ್ವವನ್ನು ರದ್ದುಪಡಿಸಿಕೊಂಡು ಷೇರು ಮೊತ್ತ ರೂ. 13.16 ಲಕ್ಷಗಳನ್ನು ಹಿಂಪಡೆದಿದ್ದಾರೆ. ಪ್ರಸ್ತುತ ವರ್ಷಾಂತಕ್ಕೆ ರೂ. 452.44 ಲಕ್ಷಗಳಷ್ಟು ಷೇರು ಬಂಡವಾಳವಿರುತ್ತದೆ. ದಿನಾಂಕ: 31.03.2025ಕ್ಕೆ ಒಟ್ಟು 2803 ಸದಸ್ಯರಿರುತ್ತಾರೆ. |
| ವಿಷಯ 14:<br><br>ಟಿಪ್ಪಣಿ: | ಸಹಕಾರಿಗೆ ಮುಖ್ಯಕಾರ್ಯ ನಿರ್ವಹಣಾಧಿಕಾರಿ, ವ್ಯವಸ್ಥಾಪಕರು, ಆಂತರಿಕ ಲೆಕ್ಕಪರಿಶೋಧಕರು ಮತ್ತು ಆರ್ಥಿಕ ಸಲಹೆಗಾರರ ಸೇವಾವಧಿಯ ಮುಂದುವರಿಕೆಯ ಅನುಮೋದನೆ.<br>ಅ) ಪ್ರಸ್ತುತ ಸಹಕಾರಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಶ್ರೀ. ಮಂಜುನಾಥಪ್ಪ. ಕೆ. ಇವರು ಸೇವಾ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇವರ ಸೇವಾ ಅವಧಿಯು ದಿನಾಂಕ: 31.03.2025ರಂದು ಮುಗಿದಿದ್ದು, ಪುನಃ ಇವರ ಸೇವಾ ಅವಧಿಯನ್ನು ಹಾಲಿ ಇರುವ ಮಾಸಿಕ ಸೇವಾ ಶುಲ್ಕ ರೂ. 35,000/-ಗಳಿಂದ ರೂ. 37,500/-ಗಳಿಗೆ ಹೆಚ್ಚಳ ಮಾಡಲಾಗಿದೆ ಹಾಗೂ ನಿಗದಿತ ಸಂಚಾರ ವೆಚ್ಚ ರೂ. 12,500/-ಗಳಿಂದ ರೂ. 15,000/-ಗಳಿಗೆ ಹೆಚ್ಚಳ ಮಾಡಲಾಗಿದ್ದು, ದಿನಾಂಕ:01.04.2025 ರಿಂದ ಮುಂದಿನ 1 ವರ್ಷದ ಅವಧಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಆಡಳಿತ ಮಂಡಳಿಯ ಸಭೆಯಲ್ಲಿ ಮುಂದುವರಿಕೆಯ ಅನುಮೋದನೆಯನ್ನು ಪಡೆಯಲಾಗಿದೆ.<br><br>ಆ) ಪ್ರಸ್ತುತ ಸಹಕಾರಿಯಲ್ಲಿ ಆರ್ಥಿಕ ಸಲಹೆಗಾರರಾಗಿ ಶ್ರೀ. ಮೇಲಪ್ಪ. ಇ.ಸಿ ಇವರು ಕಾರ್ಯನಿರ್ವಹಿಸುತ್ತಿದ್ದು, ಇವರ ಸೇವಾ ಅವಧಿಯು ದಿನಾಂಕ: 31.03.2025ರಂದು ಮುಗಿದಿದ್ದು, ಪುನಃ ಇವರ ಸೇವಾ ಅವಧಿಯನ್ನು ಹಾಲಿ ಇರುವ ನಿಗದಿತ ಸಂಚಾರ ವೆಚ್ಚ ರೂ. 10,000/- ಗಳನ್ನು ರೂ. 12,000/-ಗಳಿಗೆ ಹೆಚ್ಚಳ ಮಾಡಲಾಗಿ, ದಿನಾಂಕ: 01.04.2025ರಿಂದ ಮುಂದಿನ ಒಂದು ವರ್ಷದ ಅವಧಿಗೆ ಆಡಳಿತ ಮಂಡಳಿಯ ಸಭೆಯಲ್ಲಿ ಮುಂದುವರಿಕೆಯ ಅನುಮೋದನೆಯನ್ನು ಪಡೆಯಲಾಗಿದೆ.<br><br>ಇ) ಪ್ರಸ್ತುತ ಸಹಕಾರಿಯಲ್ಲಿ ವ್ಯವಸ್ಥಾಪಕರಾಗಿ ಶ್ರೀ. ವಾಸುಗೊಲ್ಲ ಇವರು ಸೇವಾ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇವರ ಸೇವಾ ಅವಧಿಯು ದಿನಾಂಕ: 31.03.2025ರಂದು ಮುಗಿದಿದ್ದು, ಪುನಃ ಇವರ ಸೇವಾ ಅವಧಿಯನ್ನು ಹಾಲಿ ಇರುವ ಮಾಸಿಕ ಸೇವಾ ಶುಲ್ಕ ರೂ. 22,500/- ಗಳಿಂದ ರೂ. 25,000/-ಗಳಿಗೆಹೆಚ್ಚಳ ಮಾಡಲಾಗಿದೆ ಹಾಗೂ ನಿಗದಿತ ಸಂಚಾರ ವೆಚ್ಚ ರೂ. 10,000/-ಗಳನ್ನು ರೂ. 12,500/-ಗಳಿಗೆ ಹೆಚ್ಚಳ ಮಾಡಲಾಗಿ, ದಿನಾಂಕ:01.04.2025ರಿಂದ ಮುಂದಿನ 1 ವರ್ಷದ ಅವಧಿಗೆ ವ್ಯವಸ್ಥಾಪಕರಾಗಿ ಆಡಳಿತ ಮಂಡಳಿಯ ಸಭೆಯಲ್ಲಿ ಮುಂದುವರಿಕೆಯ ಅನುಮೋದನೆಯನ್ನು ಪಡೆಯಲಾಗಿದೆ.<br><br>ಈ)ಪ್ರಸ್ತುತ ಸಹಕಾರಿಯಲ್ಲಿ ಆಂತರಿಕ ಲೆಕ್ಕಪರಿಶೋಧಕರಾಗಿ ಕೆಲಸ ನಿರ್ವಹಿಸುತ್ತಿರುವ ಶ್ರೀ. ಯೂಸುಫ್.ಬಿ.ಎ ಇವರ ಸೇವಾ ಗುತ್ತಿಗೆ ಅವಧಿಯು ದಿನಾಂಕ:31.03.2025ಕ್ಕೆ ಮುಗಿದಿದ್ದು, ಪುನಃ ಇವರ ಸೇವಾ ಅವಧಿಯನ್ನು ಹಾಲಿ ಇರುವ ಸೇವಾ ಶುಲ್ಕ ರೂ. 16,000/- ಗಳಿಂದ ರೂ.18,000/-ಗಳಿಗೆ ಹೆಚ್ಚಳ ಮಾಡಿ ದಿನಾಂಕ: 01.04.2025ರಿಂದ ಮುಂದಿನ ಒಂದು ವರ್ಷದ ಅವಧಿಗೆ ಆಡಳಿತ ಮಂಡಳಿಯ ಸಭೆಯಲ್ಲಿ ಮುಂದುವರಿಕೆಯ ಅನುಮೋದನೆಯನ್ನು ಪಡೆಯಲಾಗಿದೆ.<br><br>ವಿಷಯಗಳನ್ನು ಅನುಸಮರ್ಥನೆಗಾಗಿ ಸಾಮಾನ್ಯ ಸಭೆಯ ಮುಂದೆ ಮಂಡಿಸಲಾಗಿದೆ. |

**ವಿಷಯ 15:** ಇತರ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ವರದಿ:

**ಟಿಪ್ಪಣಿ:** ಪ್ರಸ್ತುತ ಹಣಕಾಸು ವರ್ಷದಲ್ಲಿ ನಮ್ಮ ಸಹಕಾರಿಯು ಕೆ ಎಸ್ ಬಿ ಮೀಡಿಯಾ ಕೋಆಪರೇಟಿವ್ ಫೆಡರೇಶನ್ ನಲ್ಲಿ ರೂ. 2,00,000/- ಶೇರು ಖರೀದಿಸಿ ಸದಸ್ಯತ್ವವನ್ನು ಹೊಂದಿರುತ್ತದೆ.

**ವಿಷಯ 16:** ಕಟ್ ಬಾಕಿ ಸಾಲಗಳನ್ನು ಏಕ ಕಂತಿನಲ್ಲಿ ತೀರುವಳಿ ಮಾಡಿರುವ ಕ್ರಮವನ್ನು ಅನುಮೋದಿಸುವುದು.

**ಟಿಪ್ಪಣಿ:** ಸಾಲ ವಸೂಲಾತಿಯಲ್ಲಿ ನಮ್ಮ ಸತತ ಎಲ್ಲಾ ಪ್ರಯತ್ನಗಳ ಹೊರತಾಗಿಯೂ ಈ ಕೆಳಗಿನ ಸಾಲಗಾರರು ಸಾಲದ ಬಾಕಿಯನ್ನು ತೀರಿಸಲು ವಿಫಲರಾಗಿರುವರು. ಆದರೂ, ನಮ್ಮ ಪ್ರಯತ್ನ ನಿರಂತರವಾಗಿ ಮುಂದುವರಿಸಿದ ಪರಿಣಾಮ ಈ ಕೆಳಗಿನ ಸುಸ್ತಿ ಬಾಕಿ ಸಾಲಗಳನ್ನು ಏಕ ಕಂತಿನಲ್ಲಿ ತೀರುವಳಿ ಮಾಡಲು ಸಾಧ್ಯವಾಗಿದೆ. ವಿವರಗಳು ಈ ಕೆಳಗಿನಂತಿವೆ. **(ರೂ. ಗಳಲ್ಲಿ)**

| ಕ್ರ. ಸಂ | ಸಾಲದ ಖಾತೆ ಮತ್ತು ಖಾತೆ ತೆರೆದ ದಿನಾಂಕ | ಸಾಲಗಾರರು ಶ್ರೀ/ಶ್ರೀಮತಿ | ಮಂಜೂರಾದ ಸಾಲ/ ಸಾಲ ಬಾಕಿ | ಮರು ಪಾವತಿಸಿರುವ ಹಣ (ಅಸಲು+ಬಡ್ಡಿ+ ದಂಡ ಬಡ್ಡಿ+ಇತರೆ ಖರ್ಚು) | ದಂಡ ಬಡ್ಡಿ/ಬಡ್ಡಿಯಲ್ಲಿ ಮನ್ನಾ ಮಾಡಿದ ಹಣ | ಖಾತೆ ಚುಕ್ತಗೊಂಡ ದಿನಾಂಕ/ ಆಡಳಿತ ಮಂಡಳಿ ಸಭೆಯ ದಿನಾಂಕ | ಷರಾ |
|---|---|---|---|---|---|---|---|
| 01<br>02<br>03 | MGL-2013/11 16.03.2013<br>MGL-2013/37 27.06.2014<br>MGL-2013/93 28.11.2016 | ಅಲ್ತಾಫ್ ಖಾನ್ | 20,00,000/ 5,05,591<br>30,00,000/ 16,72,527<br>30,00,000/ 25,07,446 | 1,58,68,267<br>ಸರಾಸರಿ ವಸೂಲಾತಿ 11.41% | 4,27,846/- | 27.06.24/ 10.05.25 | ಸಾಲಗಾರರು ದೀರ್ಘ ಅವಧಿಯಿಂದ ಸುಸ್ತಿದಾರರಾಗಿದ್ದು, ಸಾಲ ಖಾತೆಯ ವಾಯಿದೆ ಮುಗಿದು ಪೂರ್ಣ ಸಾಲ ಸುಸ್ತಿಯಾಗಿ ಎನ್ ಪಿ ಎ ಆಗಿರುವುದರಿಂದ, ದಂಡ ಬಡ್ಡಿಯಲ್ಲಿ ರಿಯಾಯಿತಿ ನೀಡಿ ಏಕ ಕಂತಿನಲ್ಲಿ ಸಾಲ ವಸೂಲು ಮಾಡಲಾಗಿದೆ, |
| 04 | SLA-2017/286 16.03.2013 | ಹೇಮಂತ್ ಕುಮಾರ್ ಆರ್ | 1,50,000/ 1,43,239 | 2,06,430/-<br>ಸರಾಸರಿ ವಸೂಲಾತಿ 5.00% | 71,100/- | 25.07.24/ 10.05.25 | ಸಾಲಗಾರರು ಸುಧೀರ್ಘ ಅವಧಿಯಿಂದ ಸುಸ್ತಿದಾರರಾಗಿದ್ದು, ಸಾಲ ಖಾತೆಯ ವಾಯಿದೆ ಮುಗಿದು ಪೂರ್ಣ ಸಾಲ ಸುಸ್ತಿಯಾಗಿ ಎನ್ ಪಿ ಎ ಆಗಿರುವುದರಿಂದ,ಬಡ್ಡಿ,ದಂಡ ಬಡ್ಡಿಯಲ್ಲಿ ರಿಯಾಯಿತಿ ನೀಡಿ ಏಕ ಕಂತಿನಲ್ಲಿ ಸಾಲ ವಸೂಲು ಮಾಡಲಾಗಿದೆ |
| 05 | MGL-2053/001 05.10.2020 | ನಾಗಮೂರ್ತಿ ವಿ ಎಲ್ | 43,25,000/ 50,01,209 | 70,65,209/-<br>ಸರಾಸರಿ ವಸೂಲಾತಿ 12.67% | 5,96,505/- | 30.09.24/ 10.05.25 | ಸಾಲಗಾರರು ಧೀರ್ಘ ಅವಧಿಯಿಂದ ಸುಸ್ತಿದಾರರಾಗಿದ್ದು, ಸಾಲ ಖಾತೆಯ ವಾಯಿದೆ ಮುಗಿದು ಪೂರ್ಣ ಸಾಲ ಸುಸ್ತಿಯಾಗಿ ಎನ್ ಪಿ ಎ ಆಗಿರುವುದರಿಂದ ಹಾಗೂ ಈಗಾಗಲೇ ಹೆಚ್ಚಿನ ಬಡ್ಡಿ ಪಾವತಿಸಿರುವುದರಿಂದ ಬಡ್ಡಿ ಮತ್ತು ದಂಡ ಬಡ್ಡಿಯಲ್ಲಿ ರಿಯಾಯಿತಿ ನೀಡಿ ಸಾಲ ವಸೂಲು ಮಾಡಲಾಗಿದೆ. |
| 06 | MGL-2013/90 28.09.2016 | ನವೀನ್ ಕುಮಾರ್ ಎ | 35,00,000/ 34,83,704 | 80,23,823/-<br>ಸರಾಸರಿ ವಸೂಲಾತಿ 14.36% | 2,64,614/- | 13.09.24/ 10.05.25 | ಸಾಲಗಾರರು ಧೀರ್ಘ ಅವಧಿಯಿಂದ ಸುಸ್ತಿದಾರರಾಗಿದ್ದು, ಸಾಲ ಖಾತೆಯ ವಾಯಿದೆ ಮುಗಿದು ಪೂರ್ಣ ಸಾಲ ಸುಸ್ತಿಯಾಗಿ ಎನ್ ಪಿ ಎ ಆಗಿರುವುದರಿಂದ,ಬಡ್ಡಿ ಮತ್ತು ದಂಡ ಬಡ್ಡಿಯಲ್ಲಿ ರಿಯಾಯಿತಿ ನೀಡಿ ಸಾಲ ವಸೂಲು ಮಾಡಲಾಗಿದೆ |

| | | | | | | | |
|---|---|---|---|---|---|---|---|
| 07 | SLA–2017/312 17.06.2019 | ಸುಶೀಲ | 1,50,000/ 1,07,784 | 2,25,010/– ಸರಾಸರಿ ವಸೂಲಾತಿ 8.35% | 29,929/- | 30.12.24/ 10.05.25 | ಸಾಲಗಾರರು ಧೀರ್ಘ ಅವಧಿಯಿಂದ ಸುಸ್ತಿದಾರರಾಗಿದ್ದು, ಸಾಲ ಖಾತೆಯ ವಾಯಿದೆ ಮುಗಿದು ಪೂರ್ಣ ಸಾಲ ಸುಸ್ತಿಯಾಗಿ ಎನ್ ಪಿ ಎ ಆಗಿರುವುದರಿಂದ,ಬಡ್ಡಿ ಮತ್ತು ದಂಡ ಬಡ್ಡಿಯಲ್ಲಿ ರಿಯಾಯಿತಿ ನೀಡಿ ಸಾಲ ವಸೂಲು ಮಾಡಲಾಗಿದೆ |
| 08 | SRA–2021/88 19.06.2019 | ಮಂಜುನಾಥ ಪಿ | 2,00,000/ 1,97,265 | 3,21,802/– ಸರಾಸರಿ ವಸೂಲಾತಿ 10.15% | 77,832/- | 29.03.25/ 10.05.25 | ಸಾಲಗಾರರು ಧೀರ್ಘ ಅವಧಿಯಿಂದ ಸುಸ್ತಿದಾರರಾಗಿದ್ದು, ಸಾಲ ಖಾತೆಯ ವಾಯಿದೆ ಮುಗಿದು ಪೂರ್ಣ ಸಾಲ ಸುಸ್ತಿಯಾಗಿ ಎನ್ ಪಿ ಎ ಆಗಿರುವುದರಿಂದ, ಬಡ್ಡಿ ಮತ್ತು ದಂಡ ಬಡ್ಡಿಯಲ್ಲಿ ರಿಯಾಯಿತಿ ನೀಡಿ ಜಾಮೀನುದಾರರಾದ ಶ್ರೀಮತಿ ವಸಂತಕುಮಾರಿ ಕೆ.ಎ. ಇವರು ಸಾಲ ಮರು ಪಾವತಿಸಿರುತ್ತಾರೆ. |
| | | | | ಒಟ್ಟು | 14,67,826/- | | |

*ಮೇಲಿನ ಸಾಲಗಾರರ ಏಕ ಕಂತು ತೀರುವಳಿಯನ್ನು ಆಡಳಿತ ಮಂಡಳಿಯಲ್ಲಿ ವಿವರವಾಗಿ ಚರ್ಚಿಸಿ, ಸಾಲಗಾರರು ಸುಧೀರ್ಘ ಅವಧಿಯಿಂದ ಸುಸ್ತಿದಾರರಾಗಿದ್ದು ಮತ್ತು ವಸೂಲಾತಿ ಕಷ್ಟಸಾಧ್ಯವೆಂದು ಕಂಡುಬಂದಿರುವುದರಿಂದ, ದಂಡ ಬಡ್ಡಿ ಮತ್ತು ಬಡ್ಡಿಯಲ್ಲಿ ರಿಯಾಯಿತಿ ನೀಡಿ, ಏಕ ಕಂತಿನಲ್ಲಿ ಹಣವನ್ನು ಪಾವತಿ ಮಾಡಿಕೊಂಡು ಸಾಲ ಖಾತೆಗಳನ್ನು ಅಖೈರುಗೊಳಿಸಲಾಗಿದೆ. ಈ ರೀತಿ ಕಟ್ ಬಾಕಿ ಸಾಲಗಳನ್ನು ಏಕ ಕಂತಿನಲ್ಲಿ ತೀರುವಳಿ ಮಾಡಿರುವ ಕ್ರಮವನ್ನು ಅನುಮೋದಿಸಲು ಕೋರಲಾಗಿದೆ.*

**ವಿಷಯ 17:** *ಆಡಳಿತ ಮಂಡಳಿ ನಿರ್ದೇಶಕರುಗಳು ಗುಜರಾತ್ ರಾಜ್ಯಕ್ಕೆ ಅಧ್ಯಯನ ಪ್ರವಾಸ ಮಾಡಿರುವುದನ್ನು ಸ್ಥಿರೀಕರಿಸಿ ಅನುಮೋದಿಸುವುದು.*

**ಟಿಪ್ಪಣಿ:** *ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರುಗಳು ಅತ್ಯಂತ ಕ್ರೀಯಾಶೀಲರಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಹಾಗೂ ಇತರೆ ದೇಶಗಳಲ್ಲಿ / ರಾಜ್ಯಗಳಲ್ಲಿ ಉತ್ತಮ ಸಹಕಾರಿಯ ಕಾರ್ಯನಿರ್ವಹಣೆ ಬಗ್ಗೆ ಅಧ್ಯಯಿಸಿ ನಮ್ಮ ಸಹಕಾರಿಯಲ್ಲಿ ಪರಿಣಾಮಕಾರಿಯಾಗಿ ಅಳವಡಿಸುವ ಉದ್ದೇಶದಿಂದ ವಿದೇಶ / ಸ್ವದೇಶ ಪ್ರವಾಸವನ್ನು ಏರ್ಪಡಿಸಲು ಯೋಜಿಸಲಾಗಿ, ಈ ಅಧ್ಯಯನ ಪ್ರವಾಸಕ್ಕಾಗಿ 2022–23 ಮತ್ತು 2023–24 ಸಾಲಿನ ಲಾಭಾಂಶದಲ್ಲಿ ಒಟ್ಟು ರೂ. 12.00 ಲಕ್ಷಗಳಿಗೆ ಅವಕಾಶ ಕಲ್ಪಿಸಲಾಗಿತ್ತು. ಪ್ರಸ್ತುತ, ಆರ್ಥಿಕ ವರ್ಷದಲ್ಲಿ ಮೆ// ಸ್ವಾಚಿ ಕನ್ಸಲ್ಟೆನ್ಸಿ ಮುಖಾಂತರ ದಿನಾಂಕ: 21.11.2024 ರಿಂದ 28.11.2024 ರ ವರೆಗೆ ಗುಜರಾತ್ ರಾಜ್ಯಕ್ಕೆ ಅಧ್ಯಯನ ಪ್ರವಾಸ ಏರ್ಪಡಿಸಲಾಗಿ, 15 ನಿರ್ದೇಶಕರು ಭಾಗವಹಿಸಿದ್ದು, ಈ ಬಾಬ್ತು ಒಟ್ಟು ರೂ. 11,64,778/– ಗಳು ಖರ್ಚಾಗಿದ್ದು, ಉಳಿಕೆ ರೂ. 35,222/– ಗಳನ್ನು ಲಾಭದ ಖಾತೆಗೆ ಮರು ಜಮಾ ಮಾಡಲಾಗಿದೆ. ಇದನ್ನು ಆಡಳಿತ ಮಂಡಳಿ ಸಭೆಯು ಅನುಮೋದಿಸಿದ್ದು, ಸಾಮಾನ್ಯ ಸಭೆಯ ಸ್ಥಿರೀಕರಣ ಕೋರಲಾಗಿದೆ.*

**ವಿಷಯ 18:** *ಸಹಕಾರಿಯ 'ಎನ್.ಕೆ.ಕೆ. ಚಾರಿಟೇಬಲ್ ಟ್ರಸ್ಟ್' ಸ್ಥಾಪನೆ ಮತ್ತು ಜಂಟಿ ಸಹಭಾಗಿತ್ವದ "ಸಹೋದ್ಯಮಗಳಲ್ಲಿ" ಭಾಗವಹಿಸುವಿಕೆ ಕುರಿತು ಕ್ರಮವಾಗದಿರುವ ಬಗ್ಗೆ ಮಾಹಿತಿ.*

**ಟಿಪ್ಪಣಿ:** *ನಮ್ಮ ಸಹಕಾರಿ ಸಂಘದಿಂದ ಒಂದು ಚಾರಿಟೇಬಲ್ ಟ್ರಸ್ಟ್‌ನ್ನು ನೋಂದಾಯಿಸಿ, ಆ ಮೂಲಕ ಸದಸ್ಯರ ಹಾಗೂ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಸಂಘದ ಕಾರ್ಯಚಟುವಟಿಕೆಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಅನುಕೂಲವಾಗುವುದರ ಸಲುವಾಗಿ, ನೋಂದಣಿ ಮಾಡಿಸಲು ಹಿಂದಿನ 11ನೇ ಸಾಮಾನ್ಯ ಸಭೆಯ ಅನುಮೋದನೆ ಪಡೆಯಲಾಗಿತ್ತು. ಆದರೆ, ವಿವಿಧ ಕಾರಣಗಳಿಂದಾಗಿ ಟ್ರಸ್ಟ್ ಸ್ಥಾಪನೆ ಬಗ್ಗೆ ಯಾವುದೇ ಕ್ರಮವಾಗಿರುವುದಿಲ್ಲವೆಂಬ ವಿಷಯವನ್ನು ಸಾಮಾನ್ಯ ಸಭೆಯ ಗಮನಕ್ಕೆ ಮಂಡಿಸಲಾಗಿದೆ.*

*ಅದೇ ರೀತಿ ಸಹಕಾರಿ ಸಂಘದ ಆರ್ಥಿಕ ಬೆಳವಣಿಗೆ ಹಾಗೂ ಆದಾಯ ಹೆಚ್ಚಿಸಿ ಕೊಳ್ಳುವ ದೃಷ್ಟಿಯಿಂದ ಜಂಟಿ ಸಹಭಾಗಿತ್ವದ "ಸಹೋದ್ಯಮಗಳಲ್ಲಿ" ಪಾಲುದಾರಿಕೆ ವ್ಯವಸ್ಥೆಯಲ್ಲಿ ಭಾಗವಹಿಸುವ ಬಗ್ಗೆ ಈ ಹಿಂದಿನ 11ನೇ ಸಾಮಾನ್ಯ ಸಭೆಯ ಅನುಮೋದನೆ ಪಡೆಯಲಾಗಿತ್ತು, ಆದರೆ, ಸೂಕ್ತವಾದ ಪ್ರಸ್ತಾವನೆಗಳ ಕೊರತೆಯಿಂದಾಗಿ ಈ ಬಗ್ಗೆ ಯಾವುದೇ ಕ್ರಮವಾಗಿರುವುದಿಲ್ಲವೆಂಬ ವಿಷಯವನ್ನು ಸಾಮಾನ್ಯ ಸಭೆಯ ಗಮನಕ್ಕೆ ಮಂಡಿಸಲಾಗಿದೆ.*

| | |
|---|---|
| ವಿಷಯ 19:<br><br>ಟಿಪ್ಪಣಿ: | ಸಹಕಾರಿಯ ಹಳೇ ವಾಹನವನ್ನು ಮಾರಾಟ ಮಾಡಿ ಹೊಸ ವಾಹನವನ್ನು ಖರೀದಿಸಿದ ಬಗ್ಗೆ ಮಾಹಿತಿ.<br><br>ಸಹಕಾರಿಯ ಹಿಂದಿನ 12ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಹಳೆಯ ವಾಹನವನ್ನು ಮಾರಾಟ ಮಾಡಿ ಹೊಸ ವಾಹನ ಖರೀದಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡಿದನ್ವಯ, ಹಳೆಯ ವಾಹನವನ್ನು ರೂ. 4,74,765/- ಗಳಿಗೆ ಮಾರಾಟ ಮಾಡಿ, ಹೊಸ ಇನ್ನೋವ ಕ್ರಿಷ್ಟ (GX-MT7S) ಅನ್ನು ರೂ. 45235/- ಗಳ ಡಿಸ್ಕೌಂಟ್‌ಗಳೊಂದಿಗೆ ರೂ. 25,51,409.68 ಗಳಿಗೆ ಖರೀದಿಸಲಾಗಿರುವ ಬಗ್ಗೆ ಸಾಮಾನ್ಯ ಸಭೆಯ ಗಮನಕ್ಕೆ ಮಂಡಿಸಲಾಗಿದೆ. |
| ವಿಷಯ 20:<br><br>ಟಿಪ್ಪಣಿ: | ಸಹಕಾರಿಯು ಸ್ವಂತ ಕಟ್ಟಡ ಹೊಂದುವ ಉದ್ದೇಶದಿಂದ ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ 29.6*45 ಅಡಿ ಅಳತೆಯ ಮೂಲೆ ನಿವೇಶನದ ಹಳೇ ಕಟ್ಟಡವನ್ನು ಖರೀದಿಸುವ ತೀರ್ಮಾನವನ್ನು ಅನುಮೋದಿಸುವುದು.<br><br>ನಮ್ಮ ಸಹಕಾರಿಯ ವ್ಯವಹಾರವು ದಿನೇ ದಿನೇ ವೃದ್ಧಿಯಾಗುತ್ತಿರುವುದರಿಂದ, ಸಹಕಾರಿಗೆ ಸ್ವಂತ ಕಟ್ಟಡ ಹೊಂದಲು ಮಾನ್ಯ ಸದಸ್ಯರುಗಳು ದಿನಾಂಕ: 10.09.2023 ಮತ್ತು 01.09.2024 ರಂದು ನಡೆದ 11 ಮತ್ತು 12ನೇ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ, ಬೆಂಗಳೂರಿನ ರಾಜಾಜಿನಗರ, ಬಸವೇಶ್ವರನಗರ ಮತ್ತು ವಿಜಯನಗರ ವ್ಯಾಪ್ತಿಯಲ್ಲಿ ಸೂಕ್ತವಾಗಿರುವ ವಾಣಿಜ್ಯ ನಿವೇಶನ ಅಥವಾ ಕಟ್ಟಡವು ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದಲ್ಲಿ ಸಹಕಾರಿಗೆ ತಿಳಿಸಲು ಕೋರಿ ದಿನಾಂಕ: 15.09.2024 ರಂದು ಸಹಕಾರಿಯ ಸೂಚನಾ ಫಲಕದಲ್ಲಿ ಪ್ರಕಟಣೆಯನ್ನು ಹಾಕಿ ಮಾನ್ಯ ಸದಸ್ಯರನ್ನು ವಿನಂತಿಸಲಾಗಿತ್ತು.<br><br>ದಿನಾಂಕ: 14.12.2024 ರಂದು ನಡೆದ ಆಡಳಿತ ಮಂಡಳಿಯ ಠರಾವಿನನ್ವಯ ಕಟ್ಟಡ ಉಪಸಮಿತಿಯನ್ನು ರಚಿಸಲಾಗಿ, ಸಹಕಾರಿಯ ಸದಸ್ಯರೊಬ್ಬರು ಸೂಕ್ತ ನಿವೇಶನ/ಕಟ್ಟಡವನ್ನು ಗುರುತಿಸಿ ತಿಳಿಸಿದ್ದು, ಸದರಿ ಉಪಸಮಿತಿಯು, ಪದ್ಮಭೂಷಣ ಡಾ. ರಾಜ್‌ಕುಮಾರ್ ರಸ್ತೆ (80 ಅಡಿ ರಸ್ತೆ), ಪ್ರಕಾಶ್ ನಗರ, ಬೆಂಗಳೂರು, ಪಿಐಡಿ ಸಂ. 23-31-79, ವಾರ್ಡ ನಂ 23, ಇಲ್ಲಿರುವ 29.6*45 ಅಡಿ ಅಳತೆಯ, 1332 ಚದರ ಅಡಿ ವಿಸ್ತೀರ್ಣವುಳ್ಳ ಮೂಲೆ ನಿವೇಶನದ ಹಳೇ ಕಟ್ಟಡ ಸಂಖ್ಯೆ: 79(ಹಳೇ ಸಂ. 9) ಅನ್ನು ಚದರಡಿಗೆ ರೂ. 28,000/- ದರದಂತೆ ಒಟ್ಟು ರೂ. 3,72,96,000/- ಗಳಿಗೆ ಖರೀದಿಸಲು ತೀರ್ಮಾನಿಸಲಾಗಿ, ನಿವೇಶನದ ಮಾಲೀಕರು, ಕ್ರಯದ ಕರಾರು ಹೊಂದಿರುವವರು ಮತ್ತು ಸಹಕಾರಿಯ ಅಧಿಕಾರಿಗಳು ಹಾಜರಿದ್ದು, ಕ್ರಯದ ಒಪ್ಪಂದ ಏರ್ಪಟ್ಟಿರುತ್ತದೆ. ಹಾಗೂ ರಾಜಾಜಿನಗರ ನೋಂದಣಿ ಕಛೇರಿಯಲ್ಲಿ ನೋಂದಾಯಿಸಲಾಗಿದ್ದು, ಸಹಕಾರಿಯ ಬೈಲಾ ಸಂಖ್ಯೆ: 26(2)(ನ) ಪ್ರಕಾರ ಸಹಕಾರಿಯ ಸ್ವಂತ ಉಪಯೋಗಕ್ಕೆ ನಿವೇಶನ ಖರೀದಿಸಲು/ಕಟ್ಟಡ ಕಟ್ಟಲು ಸಾಮಾನ್ಯ ಸಭೆಯ ಅನುಮೋದನೆ ಅಗತ್ಯವಿರುತ್ತದೆ. ಆದುದರಿಂದ, ಈ ವಿಷಯದ ಬಗ್ಗೆ ಆಡಳಿತ ಮಂಡಳಿಯು ಅನುಮೋದಿಸಿದ್ದು, ಸಾಮಾನ್ಯ ಸಭೆಯ ಅನುಮೋದನೆ ಕೋರಲಾಗಿದೆ. |
| ವಿಷಯ 21:<br><br>ಟಿಪ್ಪಣಿ: | ಸಹಕಾರಿಗೆ ಸ್ವಂತ ನಿವೇಶನ/ಕಟ್ಟಡ ಖರೀದಿ ಬಾಬ್ತು ಸಹಕಾರಿಯ ಮೀಸಲು ನಿಧಿ, ಕಾರ್ಯಾಚರಣಾ ಮೀಸಲು ನಿಧಿ ಮತ್ತು ಸಾಮಾನ್ಯ ಕ್ಷೇಮಾಭಿವೃದ್ಧಿ ನಿಧಿಗಳನ್ನು ಹಾಗೂ ಕಟ್ಟಡ ನಿಧಿಗಳನ್ನು ನಿಯಮಾನುಸಾರ ಉಪಯೋಗಿಕೊಳ್ಳಲು, ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿಯಿಂದ ಅನುಮತಿ ಪಡೆಯಲು ಪ್ರಸ್ತಾವನೆಯನ್ನು ಕಳುಹಿಸಲು ಅನುಮೋದಿಸುವುದು.<br><br>ಸಹಕಾರಿಗೆ ಸ್ವಂತ ನಿವೇಶನ ಮತ್ತು ಕಟ್ಟಡ ಹೊಂದಲು ಸುಮಾರು ರೂ. 5.00 ಕೋಟಿಗಳಿಗೂ ಮೀರಿ ಹಣಕಾಸು ಬೇಕಾಗಬಹುದು.<br>ಸಹಕಾರಿಯ ಬೈಲಾ ಸಂಖ್ಯೆ: ಚಾಪ್ಟರ್-10, ಕ್ರಮ ಸಂಖ್ಯೆ: 67(4)(2) ರ ಪ್ರಕಾರ ಸಹಕಾರಿಯ ವ್ಯವಹಾರ ಚಟುವಟಿಕೆಗಳಿಗೆ ಪೂರಕವಾಗಿ ಸ್ಥಿರ/ಚರಾಸ್ಥಿಗಳನ್ನು ಹೊಂದಲು, ವಾರ್ಷಿಕ ಸಾಮಾನ್ಯ ಸಭೆಯ ಅನುಮೋದನೆ ಪಡೆದು ನಿಧಿಗಳನ್ನು ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.<br>ಸಹಕಾರಿಯ ಬೈಲಾ ಸಂಖ್ಯೆ: ಚಾಪ್ಟರ್-10, ಕ್ರಮ ಸಂಖ್ಯೆ: 68(1) ರ ಪ್ರಕಾರ ಸಹಕಾರಿಗೆ ಉಂಟಾಗಿರುವ ಯಾವುದೇ ಕಾರ್ಯಾಚರಣೆ ಕೊರತೆಯನ್ನು ಅದಕ್ಕಾಗಿ ಸೃಷ್ಠಿಸಿದ ನಿಧಿಯನ್ನು ವಾರ್ಷಿಕ ಸಾಮಾನ್ಯ ಸಭೆಯ ಪೂರ್ವಾನುಮತಿ ಪಡೆದು ಶೇ. 50ಕ್ಕೂ ಮೀರಿ ಬಳಸಿಕೊಳ್ಳಬಹುದಾಗಿದೆ.<br>ಸಹಕಾರಿಯ ಬೈಲಾ ಸಂಖ್ಯೆ: ಚಾಪ್ಟರ್-10, ಕ್ರಮ ಸಂಖ್ಯೆ: 68(2) ರ ಪ್ರಕಾರ ಹಾಗೂ ಸಾಮಾನ್ಯ ಕ್ಷೇಮ ನಿಧಿಯನ್ನು, ಸಾಮಾನ್ಯ ಸಭೆಯ ಅನುಮೋದನೆ ಪಡೆದು ಸದಸ್ಯರ ಕ್ಷೇಮಾಭಿವೃದ್ಧಿ ಸಲುವಾಗಿ ಉಪಯೋಗಿಸಬಹುದಾಗಿರುತ್ತದೆ.<br>ಆದುದರಿಂದ, ನಿವೇಶನ ಖರೀದಿಸಲು ಮತ್ತು ಕಟ್ಟಡ ನಿರ್ಮಾಣ ಮಾಡಲು, ನಿಯಮಾನುಸಾರ ಅರ್ಹ ಹಣವನ್ನು ಮೀಸಲು ನಿಧಿ, ಕಾರ್ಯಾಚರಣಾ ಮೀಸಲು ನಿಧಿ ಮತ್ತು ಸಾಮಾನ್ಯ ಕ್ಷೇಮಾಭಿವೃದ್ಧಿ ನಿಧಿ ಹಾಗೂ ಕಟ್ಟಡ ನಿಧಿಗಳಿಂದ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.<br>ಸಂಯುಕ್ತ ಸಹಕಾರಿಗೆ ಈ ಮೇಲಿನಂತೆ ಮೀಸಲು ನಿಧಿಗಳಿಂದ ಹಣವನ್ನು ಉಪಯೋಗಿಸಿಕೊಳ್ಳಲು ಅನುಮತಿಕೋರಲು ಸಾಮಾನ್ಯ ಸಭೆಯು ಠರಾವು ಪಾಸ್‌ಮಾಡಲು ಕೋರಿದೆ. |
| ವಿಷಯ 22: | ಅಧ್ಯಕ್ಷರ ಅನುಮತಿಯೊಂದಿಗೆ ಚರ್ಚಿಸಬಹುದಾದ ಇತರೇ ವಿಷಯಗಳು. |
| ವಿಷಯ 23: | ವಂದನಾರ್ಪಣೆ. |

**ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ,**

**ರಾಜಾಜಿನಗರ, ಬೆಂಗಳೂರು – 560 010.**

---

**ದಿನಾಂಕ 01.09.2024 ರಂದು ಬೆಳಿಗ್ಗೆ 11.30 ಘಂಟೆಗೆ ಕರ್ನಾಟಕ ಇಂಜಿನೀಯರ್ಸ್ ಅಕಾಡೆಮಿಯ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ವಿ.ಬಿ.ಪಾಟೀಲರ ಅಧ್ಯಕ್ಷತೆಯಲ್ಲಿ ನಡೆದ ಸಹಕಾರಿಯ ಹನ್ನೆರಡನೆಯ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ನಡವಳಿಗಳು**

*******

**ಖುದ್ದು ಹಾಜರಾದ ಸದಸ್ಯರ ಸಂಖ್ಯೆ : 167**
**ಆನ್‌ಲೈನ್‌ನಲ್ಲಿ ಹಾಜರಾದ ಸದಸ್ಯರ ಸಂಖ್ಯೆ: 048**
**ಒಟ್ಟು ಹಾಜರಾದ ಸದಸ್ಯರ ಸಂಖ್ಯೆ : 215**

ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳನ್ನು ಪ್ರಾರಂಭಿಸಲು ನಿಗದಿತ ಕೋರಂ ಇಲ್ಲದಿದ್ದ ಕಾರಣ ಬೆಳಿಗ್ಗೆ 11.30 ಘಂಟೆಗೆ ಪ್ರಾರಂಭವಾಗಬೇಕಾಗಿದ್ದ ಸಭೆಯು ಅರ್ಧ ಘಂಟೆ ತಡವಾಗಿ ಅಂದರೆ ಮಧ್ಯಾಹ್ನ 12.00 ಘಂಟೆಗೆ ಪ್ರಾರಂಭವಾಯಿತು.

ಸಭೆಯ ಕಾರ್ಯಕಲಾಪಗಳನ್ನು ಸಹಕಾರಿಯ ಅಧ್ಯಕ್ಷರು ಪ್ರಾರಂಭಿಸುತ್ತಾ, ಪ್ರಸ್ತುತ ಆಡಳಿತ ಮಂಡಳಿಗೆ ಹೊಸದಾಗಿ ಶ್ರೀ ಕರ್ನಲ್ ವೆಂಕಟೇಶನಾಯಕ ಎಂಬುವವರು ವೃತ್ತಿಪರ ನಿರ್ದೇಶಕರಾಗಿ ನೇಮಕಗೊಂಡಿರುವುದಾಗಿ ತಿಳಿಸಿ ಎಲ್ಲಾ ನಿರ್ದೇಶಕರುಗಳನ್ನು ವೇದಿಕೆಯ ಮೇಲೆ ಆಸೀನರಾಗುವಂತೆ ಹಾಗೂ ಆನ್‌ಲೈನ್ ಮೂಲಕ ಮತ್ತು ಖುದ್ದು ಹಾಜರಾಗಿದ್ದ ಎಲ್ಲಾ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿ, ಸಭೆಯನ್ನು ಪ್ರಾರ್ಥನೆ / ನಾಡಗೀತೆಯೊಂದಿಗೆ ಪ್ರಾರಂಭಿಸುವಂತೆ ಕೋರಿದರು.

**ವಿಷಯ ಸಂಖ್ಯೆ – 1 : ಪ್ರಾರ್ಥನೆ :**

"ಜಯ ಭಾರತ ಜನನಿಯ ತನುಜಾತೆ" ಎಂಬ ನಾಡಗೀತೆಯೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು, ನಂತರ ಸಭೆಯ ಕಾರ್ಯಸೂಚಿಯಂತೆ ಅಧ್ಯಕ್ಷರು ಸಭೆಯನ್ನು ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಪ್ರಾರಂಭಿಸುವಂತೆ ಕೋರಿದ್ದರ ಹಿನ್ನಲೆಯಲ್ಲಿ ಶ್ರೀ ಮಂಜುನಾಥಪ್ಪ.ಕೆ, ಮುಖ್ಯಕಾರ್ಯನಿರ್ವಾಹಣಾಧಿಕಾರಿಯವರು ಸಭೆಯ ಕಾರ್ಯಕಲಾಪಗಳನ್ನು ಪ್ರಾರಂಭಿಸಿದರು.

**ವಿಷಯ ಸಂಖ್ಯೆ – 2 : ವಿಷಯ ಮತ್ತು ನಿರ್ಣಯ :**
**ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು :**

ವಾರ್ಷಿಕ ಸರ್ವ ಸದಸ್ಯರ ಸಭೆಯ ಪ್ರಾರಂಭದ ಮೊದಲು ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀ.ಮಂಜುನಾಥಪ್ಪ. ಕೆ. ರವರು ಸಭೆಯಲ್ಲಿ ಹಾಜರಿದ್ದವರೆಲ್ಲರಿಗೂ ಪ್ರಪ್ರಥಮವಾಗಿ ವಂದನೆಗಳನ್ನರ್ಪಿಸುತ್ತಾ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸಿದರು ಹಾಗೂ ವಿಷಯ ಸಂಖ್ಯೆ – 3 ನ್ನು ಸಹಕಾರಿಯ ನಿರ್ದೇಶಕರಾದ ಶ್ರೀ. ಬಸವಲಿಂಗಪ್ಪ ಶ್ಯಾವಂತಗೇರಿರವರು ನಡೆಸಿಕೊಡುವಂತೆ ಕೋರಿದರು.

**ವಿಷಯ ಸಂಖ್ಯೆ – 3 : ವಿಷಯ ಮತ್ತು ನಿರ್ಣಯ :**
**ವರದಿ ಸಾಲಿನಲ್ಲಿ ಮರಣ ಹೊಂದಿದ ಸಹಕಾರಿ ಸದಸ್ಯರಿಗೆ ಶ್ರದ್ಧಾಂಜಲಿ.**

ಸಹಕಾರಿಯ ನಿರ್ದೇಶಕರಾದ ಶ್ರೀ ಬಸವಲಿಂಗಪ್ಪ ಶ್ಯಾವಂತಗೇರಿರವರು 2023–24 ನೇ ಆರ್ಥಿಕ ವರ್ಷದ ಪ್ರಾರಂಭದಿಂದ ಇಲ್ಲಿಯವರೆಗೆ ಈ ಕೆಳಗೆ ಹೆಸರಿಸಿರುವ ಒಟ್ಟು 09 ಜನ ಸದಸ್ಯರು ಮರಣ ಹೊಂದಿರುವುದಾಗಿ ತಿಳಿಸಿದರು.

| ಕ್ರ. ಸಂ. | ಮರಣ ಹೊಂದಿದ ಸದಸ್ಯರ ಹೆಸರು | ಸದಸ್ಯತ್ವ ಸಂಖ್ಯೆ | ಮರಣ ಹೊಂದಿದ ದಿನಾಂಕ |
|---|---|---|---|
| 1. | ಶ್ರೀ ವಿರೂಪಾಕ್ಷಯ್ಯ ಹೆಚ್.ಎಂ. | 1347 | 21.07.2023 |
| 2. | ಶ್ರೀಮತಿ ಡಾ// ಸುಮಿತ್ರ ಬಾಬು | 860 | 29.12.2023 |
| 3. | ಶ್ರೀ ನಾಗನಗೌಡ ಕಂದಕೂರು (ಯಾದಗೀರ) | 1883 | 28.01.2024 |
| 4. | ಶ್ರೀ ಮೃತ್ಯುಂಜಯ ಸ್ವಾಮಿ (ರಾಯಚೂರು) | 2562 | 18.02.2024 |
| 5. | ಶ್ರೀ ಕುಮಾರ್ | 1807 | 13.03.2024 |
| 6. | ಶ್ರೀ ಅಶೋಕ್ (ರಾಯಚೂರು) | 2859 | 28.04.2024 |
| 7. | ಶ್ರೀ ದಂಡಪ್ಪ ಹಳೀಮನಿ (ರಾಯಚೂರು) | 2175 | 12.06.2024 |
| 8. | ಶ್ರೀ ವಿಜಯ ಕುಮಾರ್ ಪಾಟೀಲ್ (ರಾಯಚೂರು) | 534 | 29.06.2024 |
| 9. | ಡಾ॥ ಶ್ರೀಶೈಲಪ್ಪ ಎ. ಕಸ್ತೂರಿ | 1493 | 29.08.2024 |

ದಯಾಮಯನಾದ ಭಗವಂತನು ಅವರ ಆತ್ಮಕ್ಕೆ ಶಾಂತಿ ನೀಡಲಿ ಹಾಗೂ ಅವರುಗಳ ಕುಟುಂಬವರ್ಗದವರಿಗೆ ನೋವನ್ನು ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದು ಹೇಳುತ್ತಾ, ಒಂದು ನಿಮಿಷದ ಕಾಲ ಮೌನವನ್ನಾಚರಿಸುವಂತೆ ಕೋರಿದ್ದರ ಹಿನ್ನಲೆಯಲ್ಲಿ ಸಭೆಯಲ್ಲಿ ಹಾಜರಿದ್ದವರೆಲ್ಲರೂ ಒಂದು ನಿಮಿಷ ಮೌನವನ್ನಾಚರಿಸಿದ ನಂತರ ಸಂತಾಪ ಸೂಚನಾ ಠರಾವನ್ನು ದಾಖಲಿಸಲಾಯಿತು.

**ವಿಷಯ ಸಂಖ್ಯೆ – 4: ವಿಷಯ ಮತ್ತು ನಿರ್ಣಯ :**
**ಅಧ್ಯಕ್ಷರಿಂದ ಸ್ವಾಗತ ಭಾಷಣ.**

ಮಾನ್ಯರೆ,

ಮೊದಲಿಗೆ ನವಕಲ್ಯಾಣ ಕರ್ನಾಟಕ ಸೌಹಾರ್ಧ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ ಇದರ 12ನೇ ವಾರ್ಷಿಕ ಸಾಮಾನ್ಯ ಸಭೆಗೆ ಖುದ್ದು ಹಾಜರಾಗಿದ್ದ ಹಾಗೂ ಆನ್‌ಲೈನ್ ಮೂಲಕ ಭಾಗವಹಿಸಿದ ಎಲ್ಲಾ ಸದಸ್ಯರನ್ನು ಅತ್ಯಂತ ಆತ್ಮೀಯವಾಗಿ ಸ್ವಾಗತಿಸಿದರು. ನಮ್ಮ ಸಹಕಾರಿಯು 2012 ನೇ ಸಾಲಿನಲ್ಲಿ ಪ್ರಾರಂಭಗೊಂಡು, ಪ್ರಸ್ತುತ 12 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 13ನೇ ವರ್ಷದಲ್ಲಿ ಮುನ್ನಡೆಯುತ್ತಿದೆ. ಕಳೆದ ಹನ್ನೆರಡು ವರ್ಷಗಳಲ್ಲಿ ಸಹಕಾರಿಯ ಎಲ್ಲಾ ಸದಸ್ಯರ ಪ್ರೀತಿ, ವಿಶ್ವಾಸ, ಅಭಿಮಾನ ಹಾಗೂ ಸಹಕಾರದಿಂದಲೇ ವರ್ಷದಿಂದ ವರ್ಷಕ್ಕೆ ಎಲ್ಲಾ ಆರ್ಥಿಕ ಮಾನದಂಡಗಳಲ್ಲಿ ಉತ್ತಮವಾದ ಬೆಳವಣಿಗೆಯನ್ನು ಸಾಧಿಸಿದೆ. ಹಿಂದಿನ ವರ್ಷಕ್ಕೆ ಹೋಲಿಸಿದ್ದಲ್ಲಿ ಸಹಕಾರಿಯು ಎಲ್ಲಾ ಪ್ರಮುಖ ಹಣಕಾಸು ವಿಷಯಗಳಲ್ಲಿ ಬೆಳವಣಿಗೆಯನ್ನು ಸಾಧಿಸಿರುವುದನ್ನು ಗುರುತಿಸಬಹುದಾಗಿದೆ.

1. ದಿನಾಂಕ 10.09.2023 ರಂದು ನಡೆದ ಸಹಕಾರಿಯ ಹನ್ನೊಂದನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳು ಹಾಗೂ ದಿನಾಂಕ 31.03.2024 ಕ್ಕೆ ಅಂತ್ಯಗೊಂಡ ಲೆಕ್ಕ ಪರಿಶೋಧಕರ ವರದಿ ಹಾಗೂ ಸದರಿ ಸಾಲಿನ ಹಣಕಾಸು ತ:ಖ್ತೆಗಳನ್ನು ಮತ್ತು ವಾರ್ಷಿಕ ವರದಿಯನ್ನು ಈಗಾಗಲೇ ಸದಸ್ಯರೆಲ್ಲರಿಗೂ ಇ–ಮೇಲ್ ಮುಖಾಂತರ ಕಳುಹಿಸಲಾಗಿದೆ, ಅವುಗಳನ್ನು ಸದಸ್ಯರು ಓದಿರುವುದಾಗಿ ಭಾವಿಸುತ್ತೇನೆಂದು ತಿಳಿಸಿದರು.
2. ಸದಸ್ಯರೆಲ್ಲರೂ ಸಹಕಾರಿಯ ಪ್ರಸ್ತುತ ವಾರ್ಷಿಕ ಆಡಳಿತ ಮಂಡಳಿ ವರದಿ ಹಾಗೂ ದಿನಾಂಕ 31.03.2024 ರ ಅಂತ್ಯಕ್ಕಿದ್ದಂತೆ ಹಣಕಾಸು ತ:ಖ್ತೆಗಳನ್ನು ಗಮನಿಸಿರಬಹುದೆಂದು ಭಾವಿಸುತ್ತೇನೆಂದು, ಕಳೆದ 12 ವರ್ಷಗಳಲ್ಲಿ ಸಹಕಾರಿಯು ಹೆಚ್ಚಿನ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರ ಜೊತೆಗೆ, ತನ್ನ ಸದಸ್ಯರಿಗೆ ಸಾಲ ಹಾಗೂ ಮುಂಗಡಗಳ ಮೂಲಕ ಅವರ ಆರ್ಥಿಕ ಅವಶ್ಯಕತೆಗಳನ್ನು ಪೂರೈಸಲು ಸಾಕಷ್ಟು ಯೋಜನೆಗಳನ್ನು ಹಮ್ಮಿಕೊಂಡಿರುವುದನ್ನು ಮಾನ್ಯ ಸದಸ್ಯರು ಗಮನಿಸಲು ಕೋರುತ್ತೇನೆ. ಈ ಬಗ್ಗೆ ಅಂಕಿ ಅಂಶಗಳ ವಿವರಗಳು ಹಾಗೂ ಟಿಪ್ಪಣಿಗಳನ್ನು ಆಡಳಿತ ಮಂಡಳಿಯ ವರದಿಯಲ್ಲಿ ವಿವರವಾಗಿ ತಿಳಿಸಲಾಗಿದೆ. ಪ್ರಸ್ತುತ ವರ್ಷದಲ್ಲಿ ಠೇವಣಾತಿಗಳ ಬೆಳವಣಿಗೆ ಹಾಗೂ ಸಾಲ ವಿತರಣೆಯಲ್ಲಿ ಹೆಚ್ಚು ಪ್ರಗತಿ ಹೊಂದಲಾರದ್ದನ್ನು ಸದಸ್ಯರು ಗಮನಿಸಿರಬಹುದು, ಇದೊಂದು ಕಾರ್ಯತಂತ್ರದ (Strategic) ಹೆಜ್ಜೆಯಾಗಿದ್ದು, ಮುಂದಿನ ದಿನಗಳಲ್ಲಿ ಉತ್ತಮ ಬೆಳವಣಿಗೆ ಕಾಣಬಹುದು. ಆದರೆ, ಸಹಕಾರಿಯ ಷೇರು ಬಂಡವಾಳ, ಹೂಡಿಕೆಗಳು, ದುಡಿಯುವ ಬಂಡವಾಳ, ಲಾಭಾಂಶ ಹಾಗೂ ಒಟ್ಟಾರೆ ವ್ಯವಹಾರದಲ್ಲಿ ಸಕಾರಾತ್ಮಕ ಬೆಳವಣಿಗೆ ಸಾಧಿಸಿರುವುದನ್ನು ಗಮನಿಸಬಹುದಾಗಿದೆ. ಮೇಲೆ ತಿಳಿಸಿದ

ಸಕಾರಾತ್ಮಕ ಬೆಳವಣಿಗೆಗೆ ಸದಸ್ಯರ ಸಕ್ರೀಯ ಸಹಕಾರ, ಆಡಳಿತ ಮಂಡಳಿ ಸದಸ್ಯರ ಹಾಗೂ ಸಹಕಾರಿಯ ಸಿಬ್ಬಂದಿಯ ಸಂಪೂರ್ಣ ಸಹಕಾರದಿಂದಲೇ ಈ ಪ್ರಗತಿಯನ್ನು ಸಾಧಿಸಲಾಗಿದೆಯೆಂದು ಅಭಿಮಾನ ಪೂರ್ವಕವಾಗಿ ಹೇಳಿದರು.

3. 2023–24 ನೇ ಸಾಲಿನಲ್ಲಿ ಸಾಲ ವಿತರಣೆಯ ವಿಷಯದಲ್ಲಿ ಸಾಕಷ್ಟು ಮುನ್ನೆಚ್ಚರಿಕೆ ವಹಿಸಲಾಗಿದೆ ಹಾಗೂ ವಸೂಲಾತಿಯ ಬಗ್ಗೆ ಕಾನೂನು ಕ್ರಮಗಳು ಸೇರಿದಂತೆ ಬಹಳಷ್ಟು ಕ್ರಮಗಳನ್ನು ಕೈಗೊಂಡು, ಸಾಲ ಖಾತೆಗಳನ್ನು ಸುಸ್ಥಿತಿಯಲ್ಲಿಡುವ ಪ್ರಯತ್ನ ಮಾಡಲಾಗಿದೆ ಮತ್ತು ಸತತ ಪ್ರಯತ್ನದಿಂದ ಕೆಲವು ಸಾಲಗಾರರಿಂದ ಏಕಕಾಲಿಕ ತೀರುವಳಿಯಲ್ಲಿ ಸಾಲ ವಸೂಲಾತಿ ಮಾಡಿ ಕೆಲವು ಸುಸ್ತಿ ಸಾಲ ಖಾತೆಗಳನ್ನು ಚುಕ್ತಗೊಳಿಸಲಾಗಿದೆ. 2023–24 ನೇ ಸಾಲಿನಲ್ಲಿ ಠೇವಣಿಗಳ ಮೇಲಿನ ಬಡ್ಡಿ ದರಗಳಲ್ಲಿ ಯಥಾಸ್ಥಿತಿ ಕಾಯ್ದುಕೊಂಡು ವ್ಯವಹಾರಿಕ ಖರ್ಚುಗಳನ್ನು ಹಾಗೂ ಆಡಳಿತಾತ್ಮಕ ವೆಚ್ಚಗಳನ್ನು ಹತೋಟಿಯಲ್ಲಿಡಲಾಗಿದೆ. ಇದರ ಪರಿಣಾಮವಾಗಿ 2022–23 ನೇ ಸಾಲಿಗಿಂತ 2023–24 ನೇ ಸಾಲಿನಲ್ಲಿ ನಿವ್ವಳ ಲಾಭದಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಿಗೆ ಲಾಭ ಗಳಿಸಿರುವುದನ್ನು ಗಮನಿಸಬಹುದು ಮತ್ತು ಪ್ರಸ್ತುತ ವರ್ಷದಲ್ಲಿ ಸಾಕಷ್ಟು ಅವಕಾಶಗಳನ್ನು ಒದಗಿಸಿ ಹಣಕಾಸಿನ ಸ್ಥಿತಿಯನ್ನು ಸಧೃಡಗೊಳಿಸಲಾಗುವುದೆಂದು ತಿಳಿಸಿದರು.

4. 2024–25 ಮತ್ತು 2025–26 ನೇ ಸಾಲುಗಳಿಗೆ ಸಂಬಂಧಿಸಿದಂತೆ ಸರಾಸರಿ 8 ರ ಬೆಳವಣಿಗೆಯೊಂದಿಗೆ ಪ್ರಮುಖ ಹಣಕಾಸು ಬಾಬ್ತುಗಳಲ್ಲಿ ಸಾಧಿಸಬಹುದಾದ ಗುರಿಗಳನ್ನು ಹಾಕಿಕೊಳ್ಳಲಾಗಿದೆ. 2024–25 ನೇ ಸಾಲಿನಲ್ಲಿ ನಿವ್ವಳ ಲಾಭದ ಗುರಿಯನ್ನು ರೂ.120.00 ಲಕ್ಷಗಳಿಗೆ ಹಾಗೂ 2025–26 ನೇ ಸಾಲಿನಲ್ಲಿ ರೂ.130.00 ಲಕ್ಷಗಳಿಗೆ ಏರಿಸಲು ಗುರಿ ನಿಗದಿಪಡಿಸಲಾಗಿದೆ. ಮುಂದಿನ ದಿನಗಳಲ್ಲಿ ಸಹಕಾರಿಯ ಸ್ವಂತ ನಿಧಿಗಳನ್ನು ಬಲಪಡಿಸಿಕೊಂಡು, ಆರ್ಥಿಕವಾಗಿ ಸಧೃಡ ಹೊಂದಲು ಬೇಕಾದಂತಹ ಕ್ರಮವಿಡಲು ನಿರ್ಧರಿಸಿದ್ದೇವೆ. ಸದಸ್ಯರೆಲ್ಲರ ಸಹಕಾರ ಹಾಗೂ ಪ್ರೋತ್ಸಾಹ ಮತ್ತು ಸಹಕಾರಿಯ ವ್ಯವಹಾರದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದರಿಂದ, ಆಡಳಿತ ಮಂಡಳಿ ವರದಿಯಲ್ಲಿ ವಿವರಿಸಿರುವಂತೆ ನಿಗದಿತ ಗುರಿ ಮುಟ್ಟುವ ವಿಶ್ವಾಸವನ್ನು ಹೊಂದಿರುವುದಾಗಿ ತಿಳಿಸಿದರು.

5. ಸಹಕಾರಿಯ ಹೂಡಿಕೆ ರೂ.2.50 ಕೋಟಿಯಷ್ಟು ಶ್ರೀ ಗುರುರಾಘವೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಮಾಡಿರುವುದು ಸದಸ್ಯರೆಲ್ಲರ ಗಮನಕ್ಕೆ ಈಗಾಗಲೇ ತರಲಾಗಿದೆ, ಇದೂ ಕೂಡ ನಮ್ಮ ಕಳವಳಕ್ಕೆ ಕಾರಣವಾಗಿದೆ. ನಮ್ಮ ಠೇವಣಿ ವಾಪಸ್ ಬರುತ್ತದೆಂಬ ಭರವಸೆ ಇದ್ದರೂ ಕೂಡ, ಸದರಿ ಠೇವಣಿಯ ಅಪಾಯದ ಆತಂಕ ಇದ್ದೇ ಇರುತ್ತದೆ. ಆದ್ದರಿಂದ, ಈ ವರ್ಷದಿಂದ ಬ್ಯಾಂಕಿನ ಲಾಭಾಂಶದಲ್ಲಿ ಹೆಚ್ಚಿನ ಅವಕಾಶವನ್ನು ಮಾಡಲಾಗಿದ್ದು, ಪ್ರಸ್ತುತ ರೂ.45.85 ಲಕ್ಷಗಳ ಪ್ರಾವಿಷನ್ ಇರುತ್ತದೆ. ಮುಂದಿನ ವರ್ಷದಿಂದ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿ, ಸಹಕಾರಿ ಸಂಘದ ಆರ್ಥಿಕ ಬಲಿಷ್ಠತೆ ಹೆಚ್ಚಿಸಲು ಕ್ರಮವಿಡಲಾಗುವುದೆಂದು ತಿಳಿಸಿದರು.

6. **ಸಹಕಾರಿಯ ರಾಯಚೂರು ಶಾಖೆಯ ಪ್ರಗತಿ :**

ಸಹಕಾರಿ ವ್ಯವಹಾರವನ್ನು ವೃದ್ಧಿಸುವ ಉದ್ದೇಶಕ್ಕಾಗಿ ರಾಯಚೂರಿನಲ್ಲಿ ಹೊಂದಿರುವ ಶಾಖೆಯ ವ್ಯವಹಾರಗಳನ್ನು ವೃದ್ಧಿಸುವುದರ ಮೂಲಕ ದಿನಾಂಕ 31.03.2024 ರ ಅಂತ್ಯಕ್ಕೆ ರೂ.36.53 ಲಕ್ಷಗಳ ಲಾಭ ಗಳಿಸಿರುವುದನ್ನು ತಿಳಿಸಲು ತುಂಬಾ ಹರ್ಷವಾಗುತ್ತದೆ. ದಿನಾಂಕ 31.03.2023 ರ ಅಂತ್ಯಕ್ಕೆ ಶಾಖೆಯ ಲಾಭ ರೂ.21.75 ಲಕ್ಷಗಳಿತ್ತು. ಶಾಖೆ ಪ್ರಾರಂಭಗೊಂಡು ಕೇವಲ ಐದು ವರ್ಷಗಳಲ್ಲಿ ಹಣಕಾಸು ವ್ಯವಹಾರಗಳಲ್ಲಿ ಪ್ರಗತಿಯನ್ನು ಸಾಧಿಸುವುದರ ಜೊತೆಗೆ ಲಾಭಾಂಶ ಗಳಿಸಿರುವುದು ಶುಭ ಸೂಚಕವಾಗಿರುತ್ತದೆ. ಶಾಖೆಯ ಹಣಕಾಸು ವ್ಯವಹಾರಗಳನ್ನು ವೃದ್ಧಿಗೊಳಿಸಿ ಲಾಭಾಂಶದ ಪ್ರಮಾಣವನ್ನು ಹೆಚ್ಚಿಸಲು ಅಗತ್ಯ ಕ್ರಮವಿಡಲಾಗಿದೆಯೆಂದು ತಿಳಿಸಿದರು.

7. **ನಿವ್ವಳ ಲಾಭ ಮತ್ತು ಲಾಭಾಂಶ :**

ವರದಿ ವರ್ಷ ಅಂದರೆ 2023–24 ನೇ ಸಾಲಿನಲ್ಲಿ ಸಹಕಾರಿಯು ರೂ.110.00 ಲಕ್ಷಗಳ ನಿವ್ವಳ ಲಾಭ ಗಳಿಸಿರುತ್ತದೆ. 2022–23 ನೇ ಸಾಲಿನಲ್ಲಿ ರೂ.104.78 ಲಕ್ಷಗಳ ಲಾಭ ಗಳಿಸಿತ್ತು, ನಮ್ಮ ಸಹಕಾರಿಯು 2013–14 ರಿಂದ ಅಂದರೆ ಸಹಕಾರಿಯ ಪ್ರಾರಂಭ ವರ್ಷದಿಂದ ಲಾಭಾಂಶದಲ್ಲಿ ಡಿವಿಡೆಂಡ್ ವಿತರಿಸಲಾಗುತ್ತಿದೆ ಹಾಗೂ ಕಳೆದ ವರ್ಷ ಶೇ.10 ರಷ್ಟು ಡಿವಿಡೆಂಡ್ ನೀಡಲಾಗಿರುತ್ತದೆ. ಆಡಳಿತ ಮಂಡಳಿಯು 2023–24 ರ ಸಾಲಿಗೆ ಡಿವಿಡೆಂಡ್‌ಅನ್ನು ಶೇ.10 ರಂತೆ ಪಾವತಿಸಲು ಶಿಫಾರಸ್ಸು

ಮಾಡಿದ್ದು, ಈ ಬಗ್ಗೆ ವ್ಯಾಪಕ ಚರ್ಚೆ ಹಾಗೂ ಸೂಕ್ತ ತೀರ್ಮಾನ ತೆಗೆದುಕೊಳ್ಳುವುದು ಒಳಿತೆಂದು ಅಭಿಪ್ರಾಯ ಪಟ್ಟಿರುತ್ತದೆಂದು ತಿಳಿಸಿದರು.

8. ಸಹಕಾರಿಯ ವೆಬ್‌ಸೈಟ್ ಅನ್ನು 10ನೇ ಸಾಮಾನ್ಯ ಸಭೆಯಲ್ಲಿ ಅನಾವರಣ ಮಾಡಲಾಗಿದೆ, ಇದರಿಂದಾಗಿ ಸದಸ್ಯರ ಹಾಗೂ ಸಹಕಾರಿಯ ಸಂಬಂಧ ಬಹಳ ಸಮೀಪವಾಗಿದೆ ಮತ್ತು ಸುಲಲಿತ ಹಾಗೂ ಸರಳವಾಗಿ ಸಂಪರ್ಕಿಸಲು ಬಹಳಷ್ಟು ಅನುಕೂಲವಾಗಿದೆ, ಮಾನ್ಯ ಸದಸ್ಯರು ಇದರ ಪ್ರಯೋಜನ ಪಡೆಯಬೇಕೆಂದು ಕೋರಿದರು.

9. ಸಹಕಾರಿಯ ಅಭಿವೃದ್ಧಿಯ ದೃಷ್ಟಿಯಿಂದ ಆಡಳಿತ ಮಂಡಳಿ ನಿರ್ದೇಶಕರುಗಳ ಅಧ್ಯಯನ ಪ್ರವಾಸವನ್ನು ಪ್ರಸಕ್ತ ಸಾಲಿನಲ್ಲಿ ಗುಜರಾತ್ ರಾಜ್ಯದಲ್ಲಿರುವ ಪ್ರತಿಷ್ಠಿತ ಸಹಕಾರಿ ಸಂಸ್ಥೆಗಳಿಗೆ ಭೇಟಿ ನೀಡುವ ಮೂಲಕ ಅಧ್ಯಯನ ಮಾಡಲು ಯೋಜನೆಯೊಂದನ್ನು ಹಮ್ಮಿಕೊಳ್ಳಲಾಗಿದೆ, ರಾಯಚೂರು ಶಾಖೆಯಲ್ಲಿ ಪಿಗ್ಮಿ ಠೇವಣಿ ಯೋಜನೆ ಅನುಷ್ಠಾನಗೊಳಿಸಲಾಗಿದೆ, ಎನ್.ಕೆ.ಕೆ. ಚಾರಿಟೆಬಲ್ ಟ್ರಸ್ಟ್ ನೋಂದಣಿ ಹಾಗೂ ಜಂಟಿ ಸಹಭಾಗಿತ್ವದ ಸಹೋದ್ಯಮಗಳಲ್ಲಿ ಭಾಗವಹಿಸುವಿಕೆ ವಿಷಯಗಳಲ್ಲಿ ನಿರೀಕ್ಷಿತ ಮಟ್ಟಕ್ಕೆ ಬೆಳವಣಿಗೆ ಇರುವುದಿಲ್ಲ. ಮುಂದಿನ ದಿನಗಳಲ್ಲಿ ಈ ಬಗ್ಗೆ ಗಮನಿಸಿ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡಲಾಗುವುದೆಂದು ಹೇಳಿದರು. 2027ರ ಮಾರ್ಚ್ ಅಂತ್ಯಕ್ಕೆ, ಸಹಕಾರಿಯ ದುಡಿಯುವ ಬಂಡವಾಳವನ್ನು ರೂ. 100.00 ಕೋಟಿಗಳಿಗಿಂತ ಹೆಚ್ಚಿಗೆ ಸಾಧಿಸುವ ಆಶಾಭಾವನೆ ಹೊಂದಿದ್ದೇವೆ ಎಂದು ತಿಳಿಸಿದರು.

**10. ಕೃತಜ್ಞತೆಗಳು :**

ನಮ್ಮ ಸಹಕಾರಿಯ ಸರ್ವಾಂಗೀಣ ಪ್ರಗತಿಗೆ ಮತ್ತು ಸಹಕಾರಿಯಲ್ಲಿ ಇಟ್ಟಿರುವ ನಂಬಿಕೆ ಹಾಗೂ ವಿಶ್ವಾಸಕ್ಕೆ ಕಾರಣಕರ್ತರಾದ ಸನ್ಮಾನ್ಯ ಸದಸ್ಯರಿಗೆ ಹಾಗೂ ಅಧ್ಯಕ್ಷನಾಗಿ ನನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ನನಗೆ ಬೆಂಬಲ, ಸಕ್ರೀಯ ಸಹಕಾರ ನೀಡಿದ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರುಗಳಿಗೆ, ಆರ್ಥಿಕ ಸಲಹೆಗಾರರಾದ ಶ್ರೀ ಮೇಲಪ್ಪ ಇ.ಸಿ., ಲೆಕ್ಕ ಪರಿಶೋಧಕರಾದ ಮೆ॥ ಬಿ.ಎಸ್. ಚಂದ್ರಶೇಖರ್ & ಕೋ., ಚಾರ್ಟರ್ಡ್ ಅಕೌಂಟೆಂಟ್ಸ್ ಹಾಗೂ ಸಹಕಾರಿಯ ಸಮರ್ಪಕ ಕಾರ್ಯ ನಿರ್ವಹಣೆಯಲ್ಲಿ ಅಗತ್ಯ ಮಾರ್ಗದರ್ಶನ ನೀಡಿರುವ ಸಹಕಾರ ಇಲಾಖೆಗೂ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಿಗೂ, ವ್ಯವಸ್ಥಾಪಕ ನಿರ್ದೇಶಕರಿಗೂ, ಸಹಕಾರಿಯು ವ್ಯವಹರಿಸುತ್ತಿರುವ ಅಪೆಕ್ಸ್ ಬ್ಯಾಂಕು, ಐಡಿಬಿಐ ಬ್ಯಾಂಕು, ಕರೂರು ವೈಶ್ಯ ಬ್ಯಾಂಕು, ಉಜ್ಜೀವನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಹಾಗೂ ಶ್ಯಾಮರಾವ್ ವಿಠ್ಠಲ್ ಕೋ–ಆಪರೇಟಿವ್ ಬ್ಯಾಂಕಿನ ವ್ಯವಸ್ಥಾಪಕರುಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅರ್ಪಣಾ ಮನೋಭಾವದಿಂದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಮಂಜುನಾಥಪ್ಪ ಕೆ. ಮತ್ತು ವ್ಯವಸ್ಥಾಪಕರಾಗಿರುವ ಶ್ರೀ.ವಾಸುಗೊಲ್ಲ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಕೊನೆಯದಾಗಿ, ತಮ್ಮೆಲ್ಲರ ಸಹಕಾರ ಹಾಗೂ ಪ್ರೋತ್ಸಾಹದಿಂದ ನಮ್ಮ ಸಹಕಾರಿಯು ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲಿ ಎಂದು ಈ ಸಂದರ್ಭದಲ್ಲಿ ಆಶಿಸುತ್ತಾ, ಈ ದಿನದ 2023–24 ನೇ ಸಾಲಿನ ಮಹಾಸಭೆಗೆ ಮತ್ತೊಮ್ಮೆ ತಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಮತ್ತು ಸಭೆಯ ಕಾರ್ಯಸೂಚಿಯಂತೆ ವಿಷಯಗಳನ್ನು ವಿವರವಾಗಿ ಚರ್ಚಿಸಿ, ವಿಷಯಗಳ ಅನುಮೋದನೆ ನೀಡಬೇಕೆಂದು ವಿನಂತಿಸುತ್ತಾ, ತಮ್ಮೆಲ್ಲರನ್ನೂ ಸಹಕಾರಿಯ 12ನೇ ವಾರ್ಷಿಕ ಸಾಮಾನ್ಯ ಸಭೆಗೆ ಹೃತ್ಪೂರ್ವಕವಾಗಿ ಮತ್ತೊಮ್ಮೆ ಸ್ವಾಗತಿಸುತ್ತೇನೆಂದು ತಿಳಿಸಿ, ಕಾರ್ಯಸೂಚಿಯನ್ವಯ ವಿಷಯಗಳ ಚರ್ಚೆಯನ್ನು ಪ್ರಾರಂಭಿಸಿದರು.

**ವಿಷಯ ಸಂಖ್ಯೆ – 5 : ವಿಷಯ ಮತ್ತು ನಿರ್ಣಯ :**

**ದಿನಾಂಕ 10.09.2023 ರಂದು ನಡೆದ 2022–23 ನೇ ಸಾಲಿನ ಹನ್ನೊಂದನೆಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು.**

ದಿನಾಂಕ 10.09.2023 ರಂದು ನಡೆದ ಹನ್ನೊಂದನೆಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ದಾಖಲಿಸಲು ಮಂಡಿಸಲಾಯಿತು. ಈ ಪ್ರಸ್ತಾವನೆಯನ್ನು ಶ್ರೀ ಬಾಪೂಗೌಡ ಪಾಟೀಲ್, ಸದಸ್ಯತ್ವ ಸಂ. 80 ರವರು ಸೂಚಿಸಿ, ಶ್ರೀ.ಆರ್.ಎಸ್.ಲಾಡ್ಲಾಪೂರ್, ಸದಸ್ಯತ್ವ ಸಂ.496 ರವರು ಅನುಮೋದಿಸಿದರು, ನಂತರದಲ್ಲಿ ಸರ್ವಾನುಮತದಿಂದ ನಡವಳಿಗಳನ್ನು ದಾಖಲಿಸಲಾಯಿತು.

**ವಿಷಯ ಸಂಖ್ಯೆ – 6 : ವಿಷಯ ಮತ್ತು ನಿರ್ಣಯ :**
**2023–24 ನೇ ಸಾಲಿನ ಆಡಳಿತ ಮಂಡಳಿ ವರದಿಯ ಮಂಡನೆ ಮತ್ತು ಅನುಮೋದನೆ.**

ಸಹಕಾರಿಯ ಅಧ್ಯಕ್ಷರು ಈ ವಿಷಯಕ್ಕೆ ಸಂಬಂಧಿಸಿದಂತೆ 2023–24 ನೇ ಸಾಲಿನಲ್ಲಿ ಸಹಕಾರಿಯ ಪ್ರಗತಿಯನ್ನು ಸಭೆಗೆ ವಿವರಿಸುತ್ತಾ, ದಿನಾಂಕ 01.04.2023 ರಿಂದ 31.03.2024 ರವರೆಗಿನ ಎಲ್ಲಾ ಲೆಕ್ಕ ಪರಿಶೋಧಿತ ಆರ್ಥಿಕ ತ:ಖ್ತೆಗಳಾದ ಜಮಾ – ಖರ್ಚು, ಲಾಭ – ನಷ್ಟ ಮತ್ತು ಆಸ್ತಿ – ಜವಾಬ್ದಾರಿ, ಠೇವಣಾತಿಗಳು, ಸಾಲ ಮುಂಗಡಗಳು, ಲಾಭಾಂಶ ಹಂಚಿಕೆ ಹಾಗೂ ಇದರ ಜೊತೆಯಲ್ಲಿ ಮುಂಗಡ ಪತ್ರ ಇತ್ಯಾದಿಗಳನ್ನು ಸದಸ್ಯರೆಲ್ಲರೂ ಕೂಲಂಕುಶವಾಗಿ ಪರಿಶೀಲಿಸುವಂತೆ ಹಾಗೂ ಮುಂದಿನ ವರ್ಷಕ್ಕೆ ಹಮ್ಮಿಕೊಳ್ಳಲಾದ ಕಾರ್ಯ ಯೋಜನೆಗಳನ್ನು ಅವಲೋಕಿಸಿ, ಏನಾದರೂ ಸಲಹೆ ಸೂಚನೆಗಳಿದ್ದಲ್ಲಿ ಹಾಗೂ ಈ ಕುರಿತು ತಮ್ಮ ಅಭಿಪ್ರಾಯಗಳನ್ನು ತಿಳಿಸುವಂತೆ ಹೇಳುತ್ತಾ ಆಡಳಿತ ಮಂಡಳಿಯ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸುವಂತೆ ಕೋರಿದರು.

ಸದಸ್ಯರೊಬ್ಬರು ಶ್ರೀ ಗುರುರಾಘವೇಂದ್ರ ಸಹಕಾರಿ ಬ್ಯಾಂಕಿನ ಹೂಡಿಕೆಯ ಬಗ್ಗೆ ಸ್ಪಷ್ಟೀಕರಣ ಕೋರಿದ್ದರ ಹಿನ್ನಲೆಯಲ್ಲಿ, ಸದರಿ ಬ್ಯಾಂಕಿನಲ್ಲಿ ರೂ. 2.50 ಕೋಟಿ ಠೇವಣಿಯು ವಾಪಸ್ ಬರುತ್ತದೆಂಬ ವಿಶ್ವಾಸವಿದ್ದರೂ ಕೂಡ, ನಿಯಮಗಳ ಪ್ರಕಾರ ಸದರಿ ಠೇವಣಿಗೆ ಹಂತ–ಹಂತವಾಗಿ ಅವಕಾಶ ಮಾಡಲು ಕ್ರಮವಿಡಲಾಗಿದೆ ಎಂದು ತಿಳಿಸಿದರು ಹಾಗೂ ಕಾನೂನು ಕ್ರಮವಿಡಲು ತೀರ್ಮಾನಿಸಿದ್ದನ್ನು ಸಭೆಯ ಗಮನಕ್ಕೆ ತರಲಾಯಿತು. ಸದರಿ ಸ್ಪಷ್ಟೀಕರಣದೊಂದಿಗೆ, ಸದರಿ ವಿಷಯದಲ್ಲಿ ಚರ್ಚೆಯಾಗಿ, 2023–24 ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಶ್ರೀ.ವೆಂಕಟೇಗೌಡ, ಎಮ್. ಸದಸ್ಯತ್ವ ಸಂ.426 ರವರು ಸೂಚಿಸಿ, ಶ್ರೀ ಕೆ.ಎಸ್.ಪಾಟೀಲ್, ಸದಸ್ಯತ್ವ ಸಂ.145 ರವರು ಅನುಮೋದಿಸಿದ ನಂತರ ಆಡಳಿತ ಮಂಡಳಿ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

**ವಿಷಯ ಸಂಖ್ಯೆ – 7 : ವಿಷಯ ಮತ್ತು ನಿರ್ಣಯ :**
**2023–24 ನೇ ಸಾಲಿನ ಲೆಕ್ಕ ಪರಿಶೋಧಕರಿಂದ ಪರಿಶೀಲಿಸಲ್ಪಟ್ಟ ಲೆಕ್ಕ ಪತ್ರಗಳ ಪರಿಶೀಲನೆ ಮತ್ತು ಅಂಗೀಕರಿಸುವುದು.**

ಈ ವಿಷಯಕ್ಕೆ ಸಂಬಂಧಿಸಿದಂತೆ ಸಹಕಾರಿಯ ಅಧ್ಯಕ್ಷರು 2023–24 ನೇ ಸಾಲಿನ ಸಹಕಾರಿಯ ಲೆಕ್ಕ ಪರಿಶೋಧಕರಿಂದ ಪರಿಶೀಲಿಸಲ್ಪಟ್ಟಂತಹ ಎಲ್ಲಾ ಲೆಕ್ಕ ಪತ್ರಗಳ ಪ್ರತಿಯನ್ನು (ಸಾಫ್ಟ್ ಕಾಪಿ) ಈಗಾಗಲೇ ಸದಸ್ಯರೆಲ್ಲರಿಗೂ ಇ–ಮೇಲ್ ಮುಖಾಂತರ ಕಳುಹಿಸಲಾಗಿದೆ ಹಾಗೂ ಸಭೆಗೆ ಹಾಜರಾಗಿರುವಂತಹ ಎಲ್ಲಾ ಸದಸ್ಯರಿಗೂ ಲೆಕ್ಕ ಪತ್ರಗಳ ಪ್ರತಿಯನ್ನು ನೀಡಲಾಗಿರುತ್ತದೆಂದು ತಿಳಿಸಿ, ಒಟ್ಟಾರೆ ಸದರಿ ಆರ್ಥಿಕ ವರ್ಷದಲ್ಲಿ ರೂ.110.00 ಲಕ್ಷಗಳಷ್ಟು ಲಾಭ ಪಡೆಯಲಾಗಿರುತ್ತದೆಂದು ತಿಳಿಸಿ, ಅನುಮೋದನೆ ನೀಡುವಂತೆ ಕೋರಿದರು.

ವಿಷಯವನ್ನು ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದ ನಂತರ ಶ್ರೀ ಬಿ.ಎನ್.ಜಯರಾಮ್, ಸದಸ್ಯತ್ವ ಸಂ.2387 ರವರು ಸೂಚಿಸಿ, ಶ್ರೀ.ಶಿವಮೂರ್ತಿ ಸದಸ್ಯತ್ವ ಸಂ.693 ರವರು ಅನುಮೋದಿಸಿದ ನಂತರ ಸರ್ವಾನುಮತದಿಂದ ಅಂಗೀಕರಿಸಲಾಯಿತು.

**ವಿಷಯ ಸಂಖ್ಯೆ – 8: ವಿಷಯ ಮತ್ತು ನಿರ್ಣಯ :**
**2023–24 ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.**

ಸಹಕಾರಿಯ ಅಧ್ಯಕ್ಷರು ನಿವ್ವಳ ಲಾಭದ ಹಂಚಿಕೆಯ ಬಗ್ಗೆ ವಿವರಿಸುತ್ತಾ 2023–24 ನೇ ಸಾಲಿನಲ್ಲಿ ಸಹಕಾರಿಯು ರೂ.1,10,00,378.46 ಗಳಷ್ಟು ನಿವ್ವಳ ಲಾಭವನ್ನು ಗಳಿಸಿರುತ್ತದೆ, ಇದರಲ್ಲಿ ಶಾಸನಬದ್ಧ ನಿಧಿಗಳನ್ನು ಕಡಿತಗೊಳಿಸಿದ ನಂತರ ಸದಸ್ಯರಿಗೆ ಶೇ.10 ರಷ್ಟು ಡಿವಿಡೆಂಡ್‌ನ್ನು ಹಂಚಿಕೆ ಮಾಡಲು ಆಡಳಿತ ಮಂಡಳಿಯು ಯೋಚಿಸಿರುತ್ತದೆಂದು ಹಾಗೂ ಅದರಲ್ಲಿ ಶೇ.52.50 ರಷ್ಟರ ಮೊತ್ತಕ್ಕೆ ಶಾಸನಬದ್ಧ ನಿಧಿಗಳಿಗೆ ಅವಕಾಶಗಳನ್ನು ಕಲ್ಪಿಸಬೇಕಾಗಿರುತ್ತದೆಂದು ತಿಳಿಸಿ, ಸದರಿ ವಿಷಯವನ್ನು ಸರ್ವಾನುಮತದಿಂದ ಅಂಗೀಕರಿಸಲು ಕೋರಿ, ಈ ವಿಷಯದ ಬಗ್ಗೆ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂತೆ ಕೋರಿದರು. ಸದಸ್ಯರು, ಕಳೆದ ಆರ್ಥಿಕ ವರ್ಷಕ್ಕಿಂತ ಸಹಕಾರಿಯು ವರದಿ ಸಾಲಿನಲ್ಲಿ ಹೆಚ್ಚು ಲಾಭ ಗಳಿಸಿರುತ್ತದೆಂದು ತಿಳಿಸಿ, ಶೇ.12 ರಷ್ಟು ಡಿವಿಡೆಂಡನ್ನು ನೀಡುವಂತೆ ಕೋರಲಾಗಿ, ಸಹಕಾರಿಯ ಅಧ್ಯಕ್ಷರು ಶೇ.12 ರಷ್ಟು ಡಿವಿಡೆಂಡ್ ನೀಡಲು ಸಹಕಾರಿಗೆ ಕಷ್ಟಕರವೆಂದು, ಸಹಕಾರಿಯ ಪ್ರಾರಂಭದಿಂದಲೂ ಪ್ರತೀ ವರ್ಷವೂ ಶೇ.1 ರಷ್ಟು ಡಿವಿಡೆಂಡ್ ಹೆಚ್ಚಿಸಿ ನೀಡಲಾಗುತ್ತಿದೆಯೆಂದು ತಿಳಿಸಿದರು. ಸುದೀರ್ಘ ಚರ್ಚೆಯ ನಂತರ ಅಂತಿಮವಾಗಿ ಶೇ.11 ರಷ್ಟು ಡಿವಿಡೆಂಡ್ ನೀಡಲು ಅಧ್ಯಕ್ಷರು, ಆಡಳಿತ ಮಂಡಳಿ ಮತ್ತು ಸದಸ್ಯರು ಒಪ್ಪಿ ನಿವ್ವಳ ಲಾಭದ ಹಂಚಿಕೆಯ ಬಗ್ಗೆ ಅನುಮೋದನೆ ನೀಡಲೆಂದು ಮತ್ತೊಮ್ಮೆ ಕೋರಲಾಗಿ, ಶ್ರೀ ದೇವೇಂದ್ರಪ್ಪ, ಎನ್.ಎಲ್. ಸದಸ್ಯತ್ವ ಸಂ.680 ರವರು ಸೂಚಿಸಿ, ಶ್ರೀ ರಮಣಿ ಕೊಟ್ರೇಶಪ್ಪ, ಸದಸ್ಯತ್ವ ಸಂ.916 ರವರು ಅನುಮೋದಿಸಿದ ನಂತರ ಸಭೆಯು ಸರ್ವಾನುಮತದಿಂದ ಪ್ರಸ್ತಾವನೆಯನ್ನು ಅಂಗೀಕರಿಸಿತು.

**ವಿಷಯ ಸಂಖ್ಯೆ – 9 : ವಿಷಯ ಮತ್ತು ನಿರ್ಣಯ :**

**2023-24 ನೇ ಸಾಲಿನಲ್ಲಿ ಅಂದಾಜು ವೆಚ್ಚಕ್ಕಿಂತ ಮೇಲ್ಪಟ್ಟು ವೆಚ್ಚವಾಗಿರುವುದನ್ನು ಅನುಮೋದಿಸುವುದು.**

ಸಹಕಾರಿಯ ಅಧ್ಯಕ್ಷರು ಈ ವಿಷಯದ ಕುರಿತು ಮಾತನಾಡುತ್ತಾ, 2023-24 ನೇ ಸಾಲಿನಲ್ಲಿ ಕೆಲವು ಮಾನದಂಡಗಳಲ್ಲಿ ಅಂದಾಜು ವೆಚ್ಚಕ್ಕಿಂತ ರೂ.25,52,847.00 ಗಳಷ್ಟು ಹೆಚ್ಚಿಗೆ ಖರ್ಚಾಗಿರುತ್ತದೆ, ಅವುಗಳೆಂದರೆ, ಸಹಕಾರಿ ಕಟ್ಟಡದ ಬಾಡಿಗೆ ಮೊತ್ತ, ಪ್ರೇರಣಾ ಬಡ್ಡಿ, ಎನ್.ಪಿ.ಎ. ಪ್ರಾವಿಷನ್, ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್ ನಿ., ಇದರ ಪ್ರಾವಿಷನ್ ಹಾಗೂ ನಿರ್ದೇಶಕರ ಅಧ್ಯಯನ ಪ್ರವಾಸಕ್ಕೆ ಕಲ್ಪಿಸಲಾದ ಅವಕಾಶಗಳ ಮೊತ್ತವು ಅಂದಾಜು ಮೊತ್ತಕ್ಕಿಂತ ಹೆಚ್ಚಾಗಿರುತ್ತದೆ ಹಾಗೂ ಇತರೆ ಆದಾಯಗಳಿಂದ ಅಂದಾಜು ಮೊತ್ತಕ್ಕಿಂತ ರೂ.11,64,532.61 ರಷ್ಟು ಮೊತ್ತವು ಹೆಚ್ಚಿಗೆ ಆದಾಯ ಬಂದಿರುತ್ತದೆಂದು ವಿವರಿಸಿದ ನಂತರ, ಶ್ರೀ ಎನ್.ಆರ್. ಪಾಟೀಲ್. ಸದಸ್ಯತ್ವ ಸಂ.44 ರವರು ಸೂಚಿಸಿ, ಶ್ರೀ. ಸಿ.ಎಮ್. ಅವಾರಿ, ಸದಸ್ಯತ್ವ ಸಂ.100 ರವರು ಅನುಮೋದಿಸಿದ ನಂತರ ಸಭೆಯು ವಿಷಯವನ್ನು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ ಸಂಖ್ಯೆ – 10 : ವಿಷಯ ಮತ್ತು ನಿರ್ಣಯ :**

**2024-25 ಹಾಗೂ 2025-26ನೇ ಸಾಲಿಗೆ ಅಂದಾಜು ಆಯ-ವ್ಯಯವನ್ನು ಅನುಮೋದಿಸುವುದು.**

2024-25 ಹಾಗೂ 2025-26 ನೇ ಸಾಲಿಗೆ ಅಂದಾಜು ಆಯ-ವ್ಯಯ ಪಟ್ಟಿಯನ್ನು ಪರಿಶೀಲನೆಗಾಗಿ ಈಗಾಗಲೇ ನೀಡಲಾಗಿದೆ, ಸದರಿ ಅಂದಾಜು ಆಯ-ವ್ಯಯಗಳನ್ನು ಅನುಮೋದಿಸುವ ಸಲುವಾಗಿ ಸಾಮಾನ್ಯ ಸಭೆಯ ಮುಂದೆ ವಿಷಯವನ್ನು ಮಂಡಿಸಲಾಗಿದೆ. 2024-25 ನೇ ಸಾಲಿಗೆ ಸುಮಾರು ರೂ.9.92 ಕೋಟಿಗಳ ಆದಾಯ, ರೂ.8.72 ಕೋಟಿಗಳ ಖರ್ಚು ಹಾಗೂ ರೂ.1.20 ಕೋಟಿಗಳಷ್ಟು ಲಾಭ ಗಳಿಸುವ ಮತ್ತು 2025-26 ನೇ ಸಾಲಿಗೆ ರೂ.10.70 ಕೋಟಿಗಳ ಆದಾಯ, ರೂ.9.40 ಕೋಟಿಗಳ ಖರ್ಚು ಹಾಗೂ ರೂ.1.30 ಕೋಟಿಗಳಷ್ಟು ಲಾಭ ಗಳಿಸುವ ಉದ್ದೇಶ / ಗುರಿ ಹೊಂದಿರುವುದಾಗಿ ತಿಳಿಸಿ ಅನುಮೋದನೆ ಕೋರಲಾಗಿ, ಶ್ರೀ ಗುರುಮಲ್ಲಯ್ಯ ಬಿ.ಆರ್, ಸದಸ್ಯತ್ವ ಸಂ.1071 ರವರು ಸೂಚಿಸಿ, ಶ್ರೀ.ಎಮ್. ರುದ್ರಮೂರ್ತಿ, ಸದಸ್ಯತ್ವ ಸಂ.60 ರವರು ಅನುಮೋದಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಸಂಖ್ಯೆ – 11 : ವಿಷಯ ಮತ್ತು ನಿರ್ಣಯ :**

**2024-25ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಹಾಗೂ ಸಂಭಾವನೆಯನ್ನು ನಿಗದಿಪಡಿಸುವುದು.**

ಪ್ರಸ್ತುತ 2024-25 ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಳ್ಳಬೇಕಾಗಿದ್ದು, ಕಳೆದ ಸಾಲಿಗೆ ನೇಮಿಸಿಕೊಂಡಿದ್ದ ಮೆ॥ ಚಂದ್ರಶೇಖರ ಬಿ.ಎಸ್. ಅಂಡ್ ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್ ರವರಿಗೆ ರೂ.1.00 ಲಕ್ಷ + 18% ಜಿ.ಎಸ್.ಟಿ ಗಳ ಪ್ರಕಾರ ಒಟ್ಟು ರೂ. 1.18 ಲಕ್ಷಗಳ ವಾರ್ಷಿಕ ಸಂಭಾವನೆಯನ್ನು ನೀಡಲಾಗಿತ್ತು, ಸದರಿಯವರ ಲೆಕ್ಕ ಪರಿಶೋಧನೆ ಎರಡು ವರ್ಷಗಳ ಅವಧಿಗೆ ಮಾತ್ರ ಸೀಮಿತವಾಗಿದ್ದು, ಕಳೆದ ಎರಡು ವರ್ಷಗಳಿಂದ ಮೆ॥ ಚಂದ್ರಶೇಖರ ಬಿ.ಎಸ್. ಅಂಡ್ ಕಂಪೆನಿ, ಚಾರ್ಟರ್ಡ್ ಅಕೌಂಟೆಂಟ್ಸ್‌ರವರೇ ಸಹಕಾರಿಯ ಲೆಕ್ಕ ಪರಿಶೋಧಕರಾಗಿ ಕಾರ್ಯ ನಿರ್ವಹಿಸಿದ್ದರಿಂದ ಪ್ರಸ್ತುತ ಸಾಲಿಗೆ ಸದರಿಯವರನ್ನು ಪರಿಗಣಿಸುವಂತಿಲ್ಲ. ಆದುದರಿಂದ ಮುಂದಿನ ವರ್ಷಕ್ಕೆ ಅಂದರೆ 2024-25 ನೇ ಸಾಲಿಗೆ ಹೊಸದಾಗಿ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಳ್ಳಬೇಕಾಗಿರುತ್ತದೆ, ಸರ್ಕಾರವು ಲೆಕ್ಕ ಪರಿಶೋಧಕರನ್ನು ನೇಮಿಸಿಕೊಳ್ಳಲು ಶ್ರೇಣಿಗಳನ್ನು ನಿಗದಿಪಡಿಸಿದ್ದು, ಈ ಕೆಳಕಂಡ ಅನುಮೋದಿತ ಲೆಕ್ಕ ಪರಿಶೋಧಕರ ಪಟ್ಟಿಯಿಂದ ಒಬ್ಬರನ್ನು ನೇಮಿಸಿಕೊಂಡು ಸಂಭಾವನೆಯನ್ನು ನಿಗದಿಪಡಿಸಬಹುದಾಗಿದೆ ಎಂದು ತಿಳಿಸಿದರು.

1. ಶ್ರೀಯುತ ಸಿ.ಎಂ. ಮಹಾದೇವ್, ಚಾರ್ಟರ್ಡ್ ಅಕೌಂಟೆಂಟ್ಸ್, ಮೆಂಬರ್‌ಶಿಪ್ ನಂ.ಬಿಜಿಯು 140.
2. ಮೆ॥ ಯೋಗೀಶ ಅಂಡ್ ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಮೆಂಬರ್‌ಶಿಪ್ ನಂ.ಬಿಜಿಯು 218466.
3. ಮೆ॥ ದೊಡ್ಡಮನಿ ಅಂಡ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್ಸ್, ರಿಜಿಸ್ಟರ್ ನಂ.0148125.

ಚರ್ಚೆಯ ನಂತರ ಶ್ರೀಯುತ ಸಿ.ಎಂ. ಮಹಾದೇವ್, ಚಾರ್ಟರ್ಡ್ ಅಕೌಂಟೆಂಟ್ಸ್, ಮೆಂಬರ್‌ಶಿಪ್ ನಂ.ಬಿಜಿಯು 140 ಇವರನ್ನು ವಾರ್ಷಿಕ ಸಂಭಾವನೆ ರೂ.1.00 ಲಕ್ಷ + ಜಿ.ಎಸ್.ಟಿ. ರೂ.18,000/- ಗಳಂತೆ ಒಟ್ಟು ರೂ. 1.18 ಲಕ್ಷಗಳ ವಾರ್ಷಿಕ ಸಂಭಾವನೆಯನ್ನು ನಿಗದಿಪಡಿಸಿ 2024-25 ನೇ ಸಾಲಿಗೆ ಲೆಕ್ಕ ಪರಿಶೋಧಕರಾಗಿ ನೇಮಿಸಿಕೊಳ್ಳಲು, ಶ್ರೀ ಜೆ. ಸದಾಶಿವಪ್ಪ, ಸದಸ್ಯತ್ವ ಸಂ.716 ರವರು ಸೂಚಿಸಿ, ಶ್ರೀ. ದಯಾಶಂಕರ್, ಸದಸ್ಯತ್ವ ಸಂ.1360 ರವರು ಅನುಮೋದಿಸಿದ ನಂತರ, ಸರ್ವಾನುಮತದಿಂದ ನಿರ್ಣಯಿಸಲಾಯಿತು.

**ವಿಷಯ ಸಂಖ್ಯೆ – 12 : ವಿಷಯ ಮತ್ತು ನಿರ್ಣಯ :**

**ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ಕೈಗೊಂಡ ಕ್ರಮದ ಪರಿಶೀಲನೆ.**

ಶ್ರೀಯುತ ಸಿ.ವಿ.ಚಂದ್ರಶೇಖರ್, ನಿರ್ದೇಶಕರು ಮತ್ತು ಶ್ರೀಯುತ ಎಸ್.ಎಂ.ಚಂದ್ರಶೇಖರ್, ನಿರ್ದೇಶಕರು, ಅವರ ಸಂಸ್ಥೆ ಮೆ॥ ಐಶ್ವರ್ಯ ಬ್ಯೂಟಿ ಅಂಡ್ ಹೆಲ್ತ್ ಹಾಗೂ ಶ್ರೀಮತಿ ಅನ್ನಪೂರ್ಣ ಪಾಟೀಲ್, ನಿರ್ದೇಶಕರು, ಇವರುಗಳಿಗೆ ಭದ್ರತೆ ಸಾಲಗಳನ್ನು ನೀಡಲಾಗಿದ್ದು, ಸದರಿ ಮೂರೂ ಸಾಲಗಳು ಮಾರ್ಚ್ – 2024 ರ ಅಂತ್ಯಕ್ಕೆ ಕ್ರಮಬದ್ಧ ಸಾಲಗಳಾಗಿದ್ದು, ಯಾವುದೇ ಸುಸ್ತಿ ಸಾಲಗಳಿರುವುದಿಲ್ಲವೆಂದು ಅಧ್ಯಕ್ಷರು ಸಭೆಗೆ ತಿಳಿಸಿದರು, ವಿಷಯವನ್ನು ದಾಖಲಿಸಲಾಯಿತು.

**ವಿಷಯ ಸಂಖ್ಯೆ – 13 : ವಿಷಯ ಮತ್ತು ನಿರ್ಣಯ :**
**ವರದಿ ವರ್ಷದಲ್ಲಿ ಸದಸ್ಯರನ್ನು ನೇಮಿಸಿಕೊಂಡಿದ್ದು ಮತ್ತು ಸದಸ್ಯತ್ವ ಹಿಂಪಡೆದ ಬಗೆಗಿನ ಸಂಕ್ಷಿಪ್ತ ವರದಿ.**

ಪ್ರಸ್ತುತ ಸಾಲಿನಲ್ಲಿ ಒಟ್ಟು 161 ಸದಸ್ಯರನ್ನು ಹೊಸದಾಗಿ ಸೇರಿಸಿಕೊಳ್ಳಲಾಗಿದೆ, ಹೊಸ ಸದಸ್ಯರಿಂದ ಮತ್ತು ಹಾಲಿ ಸದಸ್ಯರಿಂದ ಹೆಚ್ಚುವರಿಯಾಗಿ ರೂ.35.58 ಲಕ್ಷಗಳಷ್ಟು ಷೇರು ಮೊತ್ತ ಸಂಗ್ರಹಿಸಿ ಜಮಾ ಮಾಡಲಾಗಿದೆ ಮತ್ತು 49 ಸದಸ್ಯರು ತಮ್ಮ ಸದಸ್ಯತ್ವವನ್ನು ರದ್ದುಪಡಿಸಿಕೊಂಡು ಷೇರು ಮೊತ್ತ ರೂ.2.95 ಲಕ್ಷಗಳನ್ನು ಹಿಂಪಡೆದಿದ್ದಾರೆ, ಪ್ರಸ್ತುತ ವರ್ಷಾಂತ್ಯಕ್ಕೆ ರೂ.408.15 ಲಕ್ಷಗಳಷ್ಟು ಷೇರು ಬಂಡವಾಳವಿರುತ್ತದೆಂದು ಅಧ್ಯಕ್ಷರು ಸಭೆಯ ಅವಗಾಹನೆಗಾಗಿ ತಿಳಿಸಿದರು, ವಿಷಯವನ್ನು ದಾಖಲಿಸಲಾಯಿತು.

**ವಿಷಯ ಸಂಖ್ಯೆ – 14 : ವಿಷಯ ಮತ್ತು ನಿರ್ಣಯ :**
**ಸಹಕಾರಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ವ್ಯವಸ್ಥಾಪಕರು, ಆಂತರಿಕ ಲೆಕ್ಕ ಪರಿಶೋಧಕರು ಮತ್ತು ಆರ್ಥಿಕ ಸಲಹೆಗಾರರ ಸೇವಾವಧಿಯ ಮುಂದುವರಿಕೆಯ ಅನುಮೋದನೆ.**

ಅ) ಪ್ರಸ್ತುತ ಸಹಕಾರಿಯಲ್ಲಿ ಮುಖ್ಯ ಕಾರ್ಯನಿರ್ವಹಣಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ.ಮಂಜುನಾಥಪ್ಪ.ಕೆ ಇವರು ಸೇವಾ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು, ಇವರ ಸೇವಾ ಅವಧಿಯು ದಿನಾಂಕ 31.03.2024 ಕ್ಕೆ ಮುಕ್ತಾಯಗೊಂಡಿದ್ದು, ಪುನ: ಇವರ ಸೇವಾ ಅವಧಿಯನ್ನು ಹಾಲಿ ಇರುವ ಮಾಸಿಕ ಸೇವಾ ಶುಲ್ಕ ರೂ.32,500/– ಗಳಿಂದ ರೂ.35,000/– ಗಳಿಗೆ ಹೆಚ್ಚಳ ಮಾಡಲಾಗಿದೆ ಹಾಗೂ ನಿಗದಿತ ಸಂಚಾರ ವೆಚ್ಚ ರೂ.12,500/– ಗಳಲ್ಲಿ ಯಾವುದೇ ಹೆಚ್ಚಳ ಮಾಡದೇ, ದಿನಾಂಕ 01.04.2024 ರಿಂದ ಅನ್ವಯವಾಗುವಂತೆ ಮುಂದಿನ ಒಂದು ವರ್ಷದ ಅವಧಿಗೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾಗಿ ಆಡಳಿತ ಮಂಡಳಿ ಸಭೆಯಲ್ಲಿ ಮುಂದುವರಿಕೆ ಅನುಮೋದನೆ ಪಡೆಯಲಾಗಿದೆ.

ಆ) ಪ್ರಸ್ತುತ ಸಹಕಾರಿಯಲ್ಲಿ ಆರ್ಥಿಕ ಸಲಹೆಗಾರರಾಗಿ ಶ್ರೀ.ಮೇಲಪ್ಪ.ಇ.ಸಿ. ಇವರು ಕಾರ್ಯ ನಿರ್ವಹಿಸುತ್ತಿದ್ದು, ಇವರ ಸೇವಾ ಅವಧಿಯು ದಿನಾಂಕ 31.03.2024 ರಂದು ಮುಗಿದಿದ್ದು, ಪುನ: ಇವರ ಸೇವಾ ಅವಧಿಯನ್ನು ಹಾಲಿ ಇರುವ ನಿಗದಿತ ಸಂಚಾರ ವೆಚ್ಚ ರೂ.10,000/– ಗಳಲ್ಲಿ ಯಾವುದೇ ಹೆಚ್ಚಳವಿಲ್ಲದೆ ದಿನಾಂಕ 01.04.2024 ರಿಂದ 31.03.2025 ರವರೆಗೆ ಮುಂದಿನ ಒಂದು ವರ್ಷದ ಅವಧಿಗೆ ಆಡಳಿತ ಮಂಡಳಿ ಸಭೆಯಲ್ಲಿ ಮುಂದುವರಿಕೆಯ ಅನುಮೋದನೆಯನ್ನು ಪಡೆಯಲಾಗಿದೆ.

ಇ) ಪ್ರಸ್ತುತ ಸಹಕಾರಿಯಲ್ಲಿ ವ್ಯವಸ್ಥಾಪಕರಾಗಿ ಶ್ರೀ. ವಾಸುಗೊಲ್ಲ ಇವರು ಸೇವಾ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ಇವರ ಸೇವಾ ಅವಧಿಯು ದಿನಾಂಕ 31.03.2024 ಕ್ಕೆ ಮುಗಿದಿದ್ದು, ಪುನ: ಇವರ ಸೇವಾ ಅವಧಿಯನ್ನು ಹಾಲಿ ಇರುವ ಮಾಸಿಕ ಸೇವಾ ಶುಲ್ಕ ರೂ.20,000/– ಗಳಿಂದ ರೂ.22,500/– ಗಳಿಗೆ ಹೆಚ್ಚಳ ಮಾಡಲಾಗಿದೆ ಹಾಗೂ ನಿಗದಿತ ಸಂಚಾರ ವೆಚ್ಚ ರೂ.10,000/– ಗಳಲ್ಲಿ ಯಾವುದೇ ಹೆಚ್ಚಳ ಮಾಡದೇ ದಿನಾಂಕ 01.04.2024 ರಿಂದ ಮುಂದಿನ ಒಂದು ವರ್ಷದ ಅವಧಿಗೆ ಅಂದರೆ ದಿನಾಂಕ 31.03.2025 ರವರೆಗೆ ವ್ಯವಸ್ಥಾಪಕರಾಗಿ ಆಡಳಿತ ಮಂಡಳಿಯ ಸಭೆಯಲ್ಲಿ ಮುಂದುವರಿಕೆಯ ಅನುಮೋದನೆಯನ್ನು ಪಡೆಯಲಾಗಿದೆ.

ಈ) ಪ್ರಸ್ತುತ ಸಹಕಾರಿಯಲ್ಲಿ ಆಂತರಿಕ ಲೆಕ್ಕ ಪರಿಶೋಧಕರಾಗಿ ಕೆಲಸ ನಿರ್ವಹಿಸುತ್ತಿರುವ ಶ್ರೀ.ಯೂಸುಫ್.ಬಿ.ಎ ಇವರ ಸೇವಾ ಗುತ್ತಿಗೆ ಅವಧಿಯು ದಿನಾಂಕ 31.03.2024 ಕ್ಕೆ ಮುಗಿದಿದ್ದು, ಪುನ: ಇವರ ಸೇವಾ ಅವಧಿಯನ್ನು ಹಾಲಿ ಇರುವ ಸೇವಾ ಶುಲ್ಕ ರೂ.14,750/– ಗಳಿಂದ ರೂ.16,000/– ಗಳಿಗೆ ಹೆಚ್ಚಿಸಿ ದಿನಾಂಕ 01.04.2024 ರಿಂದ ಮುಂದಿನ ಒಂದು ವರ್ಷದ ಅವಧಿಗೆ ಅಂದರೆ ದಿನಾಂಕ 31.03.2025 ರವರೆಗೆ ಆಂತರಿಕ ಲೆಕ್ಕ ಪರಿಶೋಧಕರಾಗಿ ಆಡಳಿತ ಮಂಡಳಿಯ ಸಭೆಯಲ್ಲಿ ಮುಂದುವರಿಕೆಯ ಅನುಮೋದನೆಯನ್ನು ಪಡೆಯಲಾಗಿದೆ.

ಈ ವಿಷಯವನ್ನು ಸದಸ್ಯರೆಲ್ಲರೂ ಒಪ್ಪಿ ಅನುಸಮರ್ಥಿಸಲು ಕೋರಲಾಗಿ ಶ್ರೀ.ಕೆ.ಡಿ.ಕರ್ಜಗಿ, ಸದಸ್ಯತ್ವ ಸಂ.91 ರವರು ಸೂಚಿಸಿ, ಶ್ರೀ.ಶಿವಮೂರ್ತಿ, ಸದಸ್ಯತ್ವ ಸಂ.693 ರವರು ಅನುಮೋದಿಸಿದ ನಂತರ ಸರ್ವಾನುಮತದಿಂದ ಅನುಸಮರ್ಥಿಸಲಾಯಿತು.

**ವಿಷಯ ಸಂಖ್ಯೆ – 15 : ವಿಷಯ ಮತ್ತು ನಿರ್ಣಯ :**
**ಇತರ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ವರದಿ.**

ಪ್ರಸ್ತುತ ಹಣಕಾಸು ವರ್ಷದಲ್ಲಿ ಸಹಕಾರಿಯು ಯಾವುದೇ ಸಹಕಾರಿಯಲ್ಲಿ / ಸಹಕಾರಿ ಸಂಸ್ಥೆಯಲ್ಲಾಗಲಿ ಸದಸ್ಯತ್ವವನ್ನು ಹೊಂದಿರುವುದಿಲ್ಲ, ವಿಷಯವನ್ನು ದಾಖಲಿಸಲಾಯಿತು.

**ವಿಷಯ ಸಂಖ್ಯೆ – 16 : ವಿಷಯ ಮತ್ತು ನಿರ್ಣಯ :**
**ಕಟ್ ಬಾಕಿ ಸಾಲಗಳನ್ನು ಏಕ ಕಂತಿನಲ್ಲಿ ತೀರುವಳಿ ಮಾಡಿರುವ ಕ್ರಮವನ್ನು ಅನುಮೋದಿಸುವುದು.**

ಸಾಲ ವಸೂಲಾತಿಗಾಗಿ ಸಹಕಾರಿಯು ಸತತ ಪ್ರಯತ್ನ ಮಾಡಿದ್ದಾಗ್ಯೂ ಸದರಿ ಆರ್ಥಿಕ ವರ್ಷದಲ್ಲಿ ಏಳು ಸಾಲ ಖಾತೆಗಳು ಸುಸ್ತಿಯಾಗಿದ್ದು, ಸಾಲಗಾರರು ಸಾಲ ಮರುಪಾವತಿಸಲು ವಿಫಲರಾಗಿರುತ್ತಾರೆ.ಆದಾಗ್ಯೂ ನಿರಂತರ ಪ್ರಯತ್ನದಿಂದಾಗಿ ಸದರಿ ಸಾಲ ಖಾತೆಗಳನ್ನು ಏಕ ಕಂತಿನಲ್ಲಿ ತೀರುವಳಿ ಮಾಡಲಾಗಿದೆ ಎಂದು ಅಧ್ಯಕ್ಷರು ಸಭೆಗೆ ವಿವರಿಸಿ, ಕ್ರ.ಸಂ.1 ಪ್ರಕಾಶಯ್ಯ ವಿ. ಎಂಬುವವರಿಗೆ ರೂ.35,137, ಕ್ರ.ಸಂ.2 ಅನಿಲ್ ಕುಮಾರ್ ಆರ್. ಎಂಬುವವರಿಗೆ ರೂ.22,234, ಕ್ರ.ಸಂ.3 ಸಂತೋಷ ಕುಮಾರ್ ಜಿ.ಟಿ. ಎಂಬುವವರಿಗೆ ರೂ.9,828/–, ಕ್ರ.ಸಂ.4 ಗಾಯತ್ರಿ ಎಲ್. ಎಂಬುವವರಿಗೆ ರೂ.78,000/–, ಕ್ರ.ಸಂ.5 ಸುಧೀಂದ್ರ ಕುಮಾರ್ ಕೆ. ಎಂಬುವವರಿಗೆ ರೂ.19,380/–, ಕ್ರ.ಸಂ.6 ಬಾಳಪ್ಪಗೌಡ ಎಂಬುವವರಿಗೆ ರೂ.72,545/– ಹಾಗೂ ಕ್ರ.ಸಂ.7 ಹರ್ಷಿತ ಎಸ್.ಆರ್. ಎಂಬುವವರಿಗೆ ರೂ.2,35,346/– ಗಳಷ್ಟು ಮೊತ್ತವನ್ನು ದಂಡ ಬಡ್ಡಿ/ ಬಡ್ಡಿಯಲ್ಲಿ ರಿಯಾಯಿತಿ ನೀಡಲಾಗಿದ್ದು, ಸದರಿ ಸಾಲಗಳನ್ನು ಏಕ ಕಂತು ತೀರುವಳಿಯನ್ನು ಆಡಳಿತ ಮಂಡಳಿಯಲ್ಲಿ ವಿವರವಾಗಿ ಚರ್ಚಿಸಿ, ಸಾಲಗಾರರು ಸುದೀರ್ಘ ಅವಧಿಯಿಂದ ಸುಸ್ತಿದಾರರಾಗಿದ್ದು ಮತ್ತು ಕೆಲವರು ಮರಣ ಹೊಂದಿರುವುದನ್ನು ಗಣನೆಗೆ ತೆಗೆದುಕೊಂಡು, ದಂಡ ಬಡ್ಡಿ ಮತ್ತು ಬಡ್ಡಿಯಲ್ಲಿ ರಿಯಾಯಿತಿ ನೀಡಿ, ಏಕ ಕಂತಿನಲ್ಲಿ ಹಣವನ್ನು ವಸೂಲಿ ಮಾಡಿಕೊಂಡು ಸಾಲ ಖಾತೆಗಳನ್ನು ಖೈದುಗೊಳಿಸಲಾಗಿದೆಯೆಂದು ಸಭೆಗೆ ವಿವರಿಸುತ್ತಿದ್ದ ಸಂದರ್ಭದಲ್ಲಿ ಸದಸ್ಯರೊಬ್ಬರು ಏಕ ಕಂತಿನಲ್ಲಿ ತೀರುವಳಿ ಮಾಡುವುದರಿಂದ ಸಹಕಾರಿಗೆ ನಷ್ಟ ಉಂಟಾಗುತ್ತದೆಂದು ಪ್ರಶ್ನಿಸಲಾಗಿ, ಅಧ್ಯಕ್ಷರು ಬಡ್ಡಿ ಮೊತ್ತದಲ್ಲಿ ಸ್ವಲ್ಪ ಮಟ್ಟಿಗೆ ರಿಯಾಯಿತಿ ನೀಡಿ ಖಾತೆಯನ್ನು ಚುಕ್ತಗೊಳಿಸಲಾಗಿರುವುದೆಂದು ವಿವರಿಸಿದರು. ಈ ರೀತಿ ಕಟ್ ಬಾಕಿ ಸಾಲಗಳನ್ನು ಏಕ ಕಂತಿನಲ್ಲಿ ತೀರುವಳಿ ಮಾಡಿರುವ ಕ್ರಮವನ್ನು ಅನುಮೋದಿಸಲು ಅಧ್ಯಕ್ಷರು ಕೇಳಿದ್ದರ ಹಿನ್ನಲೆಯಲ್ಲಿ ಶ್ರೀ. ಅಮರಪ್ಪ ಗಂಗನಗೌಡರ್, ಸದಸ್ಯತ್ವ ಸಂ.66 ರವರು ಸೂಚಿಸಿ, ಶ್ರೀ. ಬಿ.ಎಸ್.ಅಡಕಿ, ಸದಸ್ಯತ್ವ ಸಂ.451 ರವರು ಅನುಮೋದಿಸಿದರು.

**ವಿಷಯ ಸಂಖ್ಯೆ – 17 : ವಿಷಯ ಮತ್ತು ನಿರ್ಣಯ :**
**ಆಡಳಿತ ಮಂಡಳಿ ನಿರ್ದೇಶಕರುಗಳ ಅಧ್ಯಯನ ಪ್ರವಾಸವನ್ನು ಅನುಮೋದಿಸುವುದು.**

ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರುಗಳು ಅತ್ಯಂತ ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಹಾಗೂ ಇತರೆ ದೇಶಗಳಲ್ಲಿ / ರಾಜ್ಯಗಳಲ್ಲಿರುವ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಸಹಕಾರಿಗಳ ಕಾರ್ಯ ನಿರ್ವಹಣೆಯ ಬಗ್ಗೆ ಅಧ್ಯಯನ ಮಾಡಿ ನಮ್ಮ ಸಹಕಾರಿಯಲ್ಲಿ ಪರಿಣಾಮಕಾರಿಯಾಗಿ ಅಳವಡಿಸುವ ಉದ್ದೇಶದಿಂದ ವಿದೇಶ / ಸ್ವದೇಶ ಪ್ರವಾಸವನ್ನು ಏರ್ಪಡಿಸಲು ಯೋಜಿಸಲಾಗಿದೆ, ಈ ಅಧ್ಯಯನ ಪ್ರವಾಸಕ್ಕಾಗಿ 2023–24 ನೇ ಸಾಲಿನ ಲಾಭಾಂಶದಲ್ಲಿ ರೂ.7.00 ಲಕ್ಷಗಳಷ್ಟು ಮೊತ್ತಕ್ಕೆ ಅವಕಾಶ ಕಲ್ಪಿಸಲಾಗಿದೆ, ಪ್ರಸ್ತುತ ಸದರಿ ಖಾತೆಯಲ್ಲಿ ಒಟ್ಟು ರೂ.12.00 ಲಕ್ಷ ಶಿಲ್ಕು ಇರುತ್ತದೆ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಉತ್ತರ ಭಾರತದ ರಾಜ್ಯಗಳಲ್ಲಿರುವ ಕೆಲವು ಉತ್ತಮ ಸಹಕಾರಿ ಸಂಸ್ಥೆಗಳಿಗೆ ಅಧ್ಯಯನ ಪ್ರವಾಸವನ್ನು ಏರ್ಪಡಿಸಲಾಗುತ್ತಿದ್ದು, ವಿಷಯವನ್ನು ಆಡಳಿತ ಮಂಡಳಿ ಸಭೆಯು ಅನುಮೋದನೆ ಪಡೆಯಲಾಗಿದ್ದು, ವಾರ್ಷಿಕ ಸಾಮಾನ್ಯ ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಗಿದೆಯೆಂದು ತಿಳಿಸಿದ್ದರ ಹಿನ್ನೆಲೆಯಲ್ಲಿ, ಸದಸ್ಯರು ಅಧ್ಯಯನ ಪ್ರವಾಸಕ್ಕಾಗಿ ಭೇಟಿ ನೀಡಿದ ಸಹಕಾರ ಸಂಘಗಳ ವಿವರಗಳು ಹಾಗೂ ವರದಿಯನ್ನು ಮುಂದಿನ ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸುವಂತೆ ತಿಳಿಸಿದರು, ಶ್ರೀ ದೇವೇಂದ್ರಪ್ಪ.ಎನ್.ಎಲ್, ಸದಸ್ಯತ್ವ ಸಂ.680 ರವರು ಸೂಚಿಸಿ, ಶ್ರೀ.ರಮಣಿ ಕೊಟ್ರೇಶಪ್ಪ, ಸದಸ್ಯತ್ವ ಸಂ.916 ರವರು ಅನುಮೋದಿಸಿದ ನಂತರ ವಿಷಯವನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ – 18 : ವಿಷಯ ಮತ್ತು ನಿರ್ಣಯ :**
**ಸಹಕಾರಿಯ 'ಎನ್.ಕೆ.ಕೆ ಚಾರಿಟೆಬಲ್ ಟ್ರಸ್ಟ್' ನೋಂದಣಿ ಪ್ರಕ್ರಿಯೆ ವಿಳಂಬವಾಗಿರುವ ಬಗ್ಗೆ.**

ಸಹಕಾರಿಯ ಅಧ್ಯಕ್ಷರು 'ಎನ್.ಕೆ.ಕೆ. ಚಾರಿಟೆಬಲ್ ಟ್ರಸ್ಟ್' ಬಗ್ಗೆ ಮಾತನಾಡುತ್ತಾ, ನಮ್ಮ ಸಹಕಾರಿ ಸಂಘದಿಂದ ಒಂದು ಚಾರಿಟೆಬಲ್ ಟ್ರಸ್ಟನ್ನು ನೋಂದಾಯಿಸಿ, ಆ ಮೂಲಕ ಸದಸ್ಯರ ಹಾಗೂ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಅನುಕೂಲವಾಗುವುದರ

ಸಲುವಾಗಿ ನೋಂದಣಿ ಮಾಡಿಸಲು ಈ ಹಿಂದಿನ 11ನೇ ಸಾಮಾನ್ಯ ಸಭೆಯ ಅನುಮೋದನೆ ಪಡೆಯಲಾಗಿತ್ತು. ಆದರೆ, ನೋಂದಣಿ ಪ್ರಕ್ರಿಯೆ ವಿಳಂಬವಾಗುತ್ತಿರುವುದರಿಂದ, ನೋಂದಣಿ ನಂತರ ಅದರ ಕಾರ್ಯವ್ಯಾಪ್ತಿ, ಚಟುವಟಿಕೆಗಳ ಬಗ್ಗೆ ವಿವರವಾದ ವರದಿಯನ್ನು ಮುಂದಿನ ಸಾಮಾನ್ಯ ಸಭೆಯ ಮುಂದೆ ಮಂಡಿಸಲಾಗುವುದೆಂದು ತಿಳಿಸಿದರು. ಆಗ ಸದಸ್ಯರು ಈ ಟ್ರಸ್ಟ್‌ನಿಂದ ಉಪಯೋಗವೇನೆಂದು ಕೇಳಲಾಗಿ, ಅಧ್ಯಕ್ಷರು ಸದಸ್ಯರ ಮಕ್ಕಳಿಗೆ, ಸಮಾಜಕ್ಕೆ ಅನುಕೂಲವಾಗುವ ಕೆಲಸ ಕಾರ್ಯಗಳನ್ನು ಹಮ್ಮಿಕೊಳ್ಳುವ ಉದ್ದೇಶದಿಂದ ಟ್ರಸ್ಟನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆಯೆಂದು ತಿಳಿಸಿ, ಸಾಮಾನ್ಯ ಸಭೆಯ ಗಮನಕ್ಕೆ ತಂದರು.

**ವಿಷಯ ಸಂಖ್ಯೆ – 19 : ವಿಷಯ ಮತ್ತು ನಿರ್ಣಯ :**
**ಸಹಕಾರಿಯ ರಾಯಚೂರು ಶಾಖೆಯಲ್ಲಿ "ಪಿಗ್ಮಿ ಠೇವಣಿ ಯೋಜನೆ" ಅನುಷ್ಠಾನಗೊಳಿಸಿರುವ ಬಗ್ಗೆ.**

ಸಹಕಾರಿಯ ಸದಸ್ಯರಲ್ಲಿ ಸಣ್ಣ ಉಳಿತಾಯವನ್ನು ಪ್ರೋತ್ಸಾಹಿಸಲು ಹೊಸದಾಗಿ "ಪಿಗ್ಮಿ ಠೇವಣಿ ಯೋಜನೆ" ಯನ್ನು ಅನುಷ್ಠಾನಕ್ಕೆ ತರಲು ಉದ್ದೇಶಿಸಿ, ಈ ಯೋಜನೆಯು ದಿನನಿತ್ಯದ ಉಳಿತಾಯ ಯೋಜನೆಯಾಗಿದ್ದು, ವ್ಯಾಪಾರಸ್ಥರು, ಉದ್ದಿಮೆದಾರರು, ಕಾರ್ಮಿಕರು, ಅಧ್ಯಾಪಕರು, ಗೃಹಿಣಿಯರು ಸೇರಿದಂತೆ ಎಲ್ಲಾ ವರ್ಗದವರಿಗೆ ಅನುಕೂಲಕರವಾಗಿದ್ದು, ಈ ಯೋಜನೆಯನ್ನು ರಾಯಚೂರು ಶಾಖೆಯಲ್ಲಿ ಕಾರ್ಯಗತಗೊಳಿಸುವ ಬಗ್ಗೆ ಈ ಹಿಂದಿನ 11ನೇ ಸಾಮಾನ್ಯ ಸಭೆಯ ಅನುಮೋದನೆ ಪಡೆಯಲಾಗಿದ್ದು, ವರದಿ ವರ್ಷದಲ್ಲಿ ಸಹಕಾರಿಯ ರಾಯಚೂರು ಶಾಖೆಯಲ್ಲಿ "ಪಿಗ್ಮಿ ಠೇವಣಿ ಯೋಜನೆ"ಯನ್ನು ಅನುಷ್ಠಾನಗೊಳಿಸಿದ್ದು, ಯಶಸ್ವಿಯಾಗಿ ಕಾರ್ಯ ನಿರ್ವಹಿಸಲಾಗುತ್ತಿದೆಯೆಂದು ತಿಳಿಸಿ, ಸಭೆಯ ಗಮನಕ್ಕೆ ತಂದರು. ಈ ಮಧ್ಯೆ ಸದಸ್ಯರು ಬೆಂಗಳೂರಿನಲ್ಲಿಯೂ ಈ ಯೋಜನೆಯನ್ನು ಜಾರಿಗೆ ತರುವಂತೆ ಕೋರಲಾಗಿ, ಅಧ್ಯಕ್ಷರು ಬೆಂಗಳೂರಿನಂತಹ ಮಹಾ ನಗರದಲ್ಲಿ ಈ ಯೋಜನೆಯನ್ನು ಜಾರಿಗೆ ತರಲು ಕಷ್ಟಸಾಧ್ಯವೆಂದು, ಮುಂದಿನ ದಿನಗಳಲ್ಲಿ ಈ ಬಗ್ಗೆ ಯೋಚಿಸಲಾಗುವುದೆಂದು ತಿಳಿಸಿ, ವಿಷಯವನ್ನು ಸಾಮಾನ್ಯ ಸಭೆಯ ಗಮನಕ್ಕೆ ತಂದರು.

**ವಿಷಯ ಸಂಖ್ಯೆ – 20 : ವಿಷಯ ಮತ್ತು ನಿರ್ಣಯ :**
**ಸಹಕಾರಿಯ ಆರ್ಥಿಕ ಬೆಳವಣಿಗೆ ದೃಷ್ಟಿಯಿಂದ ಜಂಟಿ ಸಹಭಾಗಿತ್ವದ "ಸಹೋದ್ಯಮಗಳಲ್ಲಿ" ಭಾಗವಹಿಸುವಿಕೆ ಕುರಿತು ಕ್ರಮವಾಗದಿರುವ ಬಗ್ಗೆ.**

ಸಹಕಾರಿ ಸಂಘದ ಆರ್ಥಿಕ ಬೆಳವಣಿಗೆ ಹಾಗೂ ಆದಾಯ ಹೆಚ್ಚಿಸಿಕೊಳ್ಳುವ ದೃಷ್ಠಿಯಿಂದ ಜಂಟಿ ಸಹಭಾಗಿತ್ವದ "ಸಹೋದ್ಯಮಗಳಲ್ಲಿ" ಪಾಲುದಾರಿಕೆ ವ್ಯವಸ್ಥೆಯಲ್ಲಿ ಭಾಗವಹಿಸುವ ಬಗ್ಗೆ ಕಳೆದ ಸಾಲಿನ ಸಾಮಾನ್ಯ ಸಭೆಯ ಅನುಮೋದನೆ ಪಡೆಯಲಾಗಿತ್ತು. ಆದರೆ, ಸೂಕ್ತವಾದ ಯಾವುದೇ ಪ್ರಸ್ತಾವನೆಗಳು ಬಾರದಿದ್ದ ಕಾರಣ ಈ ಬಗ್ಗೆ ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂಬ ವಿಷಯವನ್ನು ಸಾಮಾನ್ಯ ಸಭೆಯ ಗಮನಕ್ಕೆ ಮಂಡಿಸಲಾಗಿದೆಯೆಂದು ತಿಳಿಸಿದರು.

**ವಿಷಯ ಸಂಖ್ಯೆ – 21 : ವಿಷಯ ಮತ್ತು ನಿರ್ಣಯ :**
**ಸಹಕಾರಿಯಲ್ಲಿ ಪ್ರಸ್ತುತವಿರುವ ಹಳೇ ವಾಹನವನ್ನು ಮಾರಾಟ ಮಾಡಿ ಹೊಸ ವಾಹನವನ್ನು ಖರೀದಿಸಲು ಅನುಮತಿಸುವ ಬಗ್ಗೆ.**

ಸಹಕಾರಿಯಲ್ಲಿ ಪ್ರಸ್ತುತ ಉಪಯೋಗಿಸುತ್ತಿರುವ ವಾಹನವು ಐದು ವರ್ಷಗಳ ಹಿಂದೆ ಖರೀದಿಸಲಾಗಿದ್ದು, ಈಗ ಇದರ ನಿರ್ವಹಣೆ ವೆಚ್ಚವು ತುಂಬಾ ಹೆಚ್ಚಿಗೆ ಆಗುತ್ತಿದೆ. ಆದ್ದರಿಂದ, ಸದರಿ ವಾಹನವನ್ನು ಮಾರಾಟ ಮಾಡಿ ಹೊಸ ವಾಹನವನ್ನು ಖರೀದಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡುವ ವಿಷಯವನ್ನು ಸಾಮಾನ್ಯ ಸಭೆಯು ಅನುಮೋದಿಸಬೇಕೆಂದು ಕೋರಲಾಗಿ, ಶ್ರೀ ವಿನಾಯಕ, ಸದಸ್ಯತ್ವ ಸಂ.1862 ರವರು ಸೂಚಿಸಿ, ಶ್ರೀ. ಶಶಿಧರ್ ಕಂದಗಲ್, ಸದಸ್ಯತ್ವ ಸಂ.14 ರವರು ಅನುಮೋದಿಸಿದ ನಂತರ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು.

**ವಿಷಯ ಸಂಖ್ಯೆ – 22 : ವಿಷಯ ಮತ್ತು ನಿರ್ಣಯ :**
**ಅಧ್ಯಕ್ಷರ ಅನುಮತಿಯೊಂದಿಗೆ ಚರ್ಚಿಸಬಹುದಾದ ಇತರೇ ವಿಷಯಗಳು.**

ಕಾರ್ಯಸೂಚಿಯಂತೆ ಎಲ್ಲಾ ವಿಷಯಗಳು ಮುಗಿದ ನಂತರ ಅಧ್ಯಕ್ಷರು ಸಹಕಾರಿಯು ಪ್ರಾರಂಭವಾಗಿ 12 ವರ್ಷಗಳು ಕಳೆದಿದ್ದು, ವರ್ಷೇ ವರ್ಷೇ ಸಹಕಾರಿಯು ಅಭಿವೃದ್ಧಿ ಪಥದತ್ತ ಸಾಗುತ್ತಿದೆ, ಇದೇ ರೀತಿ ಮುಂದಿನ ದಿನಗಳಲ್ಲಿಯೂ ಠೇವಣಾತಿಗಳು, ಸಾಲ ನೀಡಿಕೆ, ವಸೂಲಾತಿ ಇತರೆ ಎಲ್ಲಾ ಮಾನದಂಡಗಳಲ್ಲಿಯೂ ಪ್ರಗತಿ ಸಾಧಿಸಿ, ಸಹಕಾರಿಯ ದುಡಿಯುವ ಬಂಡವಾಳವನ್ನು ಹೆಚ್ಚಿಸಬೇಕೆಂದು, ಇದಕ್ಕೆ ಮಾನ್ಯ ಸದಸ್ಯರೆಲ್ಲರೂ ಸಹಕರಿಸುವಂತೆ ಕೋರಿದರು. ಅಷ್ಟೇ ಅಲ್ಲದೇ 'ಎನ್.ಕೆ.ಕೆ. ಚಾರಿಟೆಬಲ್ ಟ್ರಸ್ಟ್'ನ್ನು ಆದಷ್ಟು ಶೀಘ್ರ ಪ್ರಾರಂಭಿಸಿ, ಇದರಿಂದ ಸಮಾಜದಲ್ಲಿನ ಬಡಬಗ್ಗರಿಗೆ, ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಇತರೇ ಸದುದ್ದೇಶ / ಸತ್ಕಾರ್ಯಗಳಿಗಾಗಿ ಅನುಕೂಲವಾಗುವಂತೆ ಕಾರ್ಯ ನಿರ್ವಹಿಸಲಾಗುವುದೆಂದು ಹಾಗೂ ಸಹಕಾರಿಗೆ ಒಂದು ಸ್ವಂತ ಕಟ್ಟಡವನ್ನು

ಪಡೆಯಲು ಉದ್ದೇಶಿಸಿದ್ದು, ಈ ಕುರಿತು ಕಾರ್ಯಪ್ರವೃತ್ತರಾಗಲು ಆಶಿಸುತ್ತೇನೆಂದು ತಿಳಿಸಿದರು ಹಾಗೂ ಸದಸ್ಯರಿಗೆ ಮಾತನಾಡಲು ಅವಕಾಶ ಕಲ್ಪಿಸಲಾಗಿದೆಯೆಂದು ತಿಳಿಸಿದರು.

- ಶ್ರೀ ಶಿವಮೂರ್ತಿ, ಸದಸ್ಯತ್ವ ಸಂ.693 ರವರು ಮಾತನಾಡುತ್ತಾ, ಅಧ್ಯಕ್ಷರು, ಈ ಸಹಕಾರಿಯು ಪ್ರಾರಂಭವಾಗಿ ಸುಮಾರು 12 ವರ್ಷಗಳಾಗಿದ್ದು, ವರ್ಷದಿಂದ ವರ್ಷಕ್ಕೆ ಪ್ರಗತಿಪಥದಲ್ಲಿ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಸಹಕಾರಿಯ ದುಡಿಯುವ ಬಂಡವಾಳವನ್ನು ಹೆಚ್ಚಿಸಲು ಯೋಜಿಸಲಾಗಿದೆಯೆಂದು ಹೇಳಿರುವ ವಿಷಯ ಹೆಮ್ಮೆ ಎನಿಸುತ್ತಿದೆಯೆಂದು ತಿಳಿಸಿ, ಆದಷ್ಟು ಶೀಘ್ರ ಸಹಕಾರಿಯ ದುಡಿಯುವ ಬಂಡವಾಳವು ರೂ.100.00 ಕೋಟಿ ತಲುಪಲಿ, ಇನ್ನೂ ಹೆಚ್ಚಿನ ಲಾಭ ಗಳಿಸಲಿ ಎಂದು ಆಶಿಸುತ್ತೇನೆಂದು ತಿಳಿಸಿದರು. ಅಷ್ಟೇ ಅಲ್ಲದೇ ಪ್ರಸ್ತುತ ಸದಸ್ಯರ ಮರಣ ಪರಿಹಾರ ನಿಧಿ ರೂ.10,000/- ಗಳಿದ್ದು, ಸದರಿ ಮೊತ್ತವನ್ನು ಹೆಚ್ಚಿಸಬೇಕೆಂದು ಕೇಳಲಾಗಿ, ಅಧ್ಯಕ್ಷರು ಸದಸ್ಯರು ಒಪ್ಪಿದಲ್ಲಿ ಮರಣ ಪರಿಹಾರ ನಿಧಿ ಮೊತ್ತವನ್ನು ರೂ.15,000/- ಗಳಿಗೆ ಹೆಚ್ಚಿಸುವುದಾಗಿ ತಿಳಿಸಿದರು. ಸದರಿ ವಿಷಯವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.
- ಶ್ರೀ ಚಂದ್ರಶೇಖರ್ ಪಾಟೀಲ್, ಸದಸ್ಯತ್ವ ಸಂ.1519 ರವರು ಮಾತನಾಡಿ, ಆದಷ್ಟು ಶೀಘ್ರ ರಾಯಚೂರು ಶಾಖೆಯಲ್ಲಿ ಜಾರಿಗೊಳಿಸಿರುವ "ಪಿಗ್ಮಿ ಠೇವಣಿ ಯೋಜನೆ"ಯನ್ನು ಬೆಂಗಳೂರಿನಲ್ಲಿಯೂ ಪ್ರಾರಂಭಿಸಿದ್ದಲ್ಲಿ ಬಹಳಷ್ಟು ಅನುಕೂಲವಾಗುತ್ತದೆಂದು ಕೋರಲಾಗಿ, ಅಧ್ಯಕ್ಷರು ಉತ್ತರಿಸಿ, ಬೆಂಗಳೂರಿನಂತಹ ಮಹಾನಗರದಲ್ಲಿ ಪಿಗ್ಮಿ ಠೇವಣಿ ಸಂಗ್ರಹಿಸುವ ಕಾರ್ಯ ಕಷ್ಟಸಾಧ್ಯವೆಂದು ಹಾಗೂ ಇದರಿಂದ ಆದಾಯದ ಕೊರತೆ ಉಂಟಾಗಬಹುದೆಂದು ತಿಳಿಸಿದರು.
- ಶ್ರೀ ದೇವೇಂದ್ರಪ್ಪ, ಸದಸ್ಯತ್ವ ಸಂ.680 ರವರು ಮಾತನಾಡುತ್ತಾ, ಸಹಕಾರಿಯ ಅಭಿವೃದ್ಧಿಗೆ ಅಧ್ಯಕ್ಷರೊಂದಿಗೆ ಎಲ್ಲಾ ನಿರ್ದೇಶಕರುಗಳು ಸಹ ಸಕ್ರಿಯವಾಗಿ ಭಾಗವಹಿಸಬೇಕೆಂದು, ಸಾಲ ಮಂಜೂರಾತಿ ಮಾಡುವಾಗು ಯಾವುದೇ ಒತ್ತಾಯಗಳಿಗೆ ಮಣಿಯಬಾರದೆಂದು ಹಾಗೂ ಯಾವುದೇ ಒಂದು ಸಾಲ ಮಂಜೂರು ಮಾಡುವಾಗ ದಾಖಲಾತಿಗಳ ನೈಜ್ಯತೆ, ಮರುಪಾವತಿಯ ಸಾಮರ್ಥ್ಯ, ಇತ್ಯಾದಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ಮಂಜೂರು ಮಾಡುವಂತೆ ತಿಳಿಸಿದರು. ಅದಕ್ಕೆ ಅಧ್ಯಕ್ಷರು ಮಾತನಾಡಿ, ಸಹಕಾರಿಯ ಯಾವುದೇ ನಿರ್ದೇಶಕರು ಸಾಲ ಮಂಜೂರಾತಿಯಲ್ಲಿ ಒತ್ತಡ ತರುವುದಿಲ್ಲ ಹಾಗೂ ಸಾಲದ ಮಂಜೂರಾತಿಯು ಸಾಲ ಪಡೆಯುವ ವ್ಯಕ್ತಿಯ ಹಿನ್ನಲೆ ಮತ್ತು ಅಡಮಾನ ಮಾಡುವ ಆಸ್ತಿಯ ಗುಣಮಟ್ಟ, ಮೌಲ್ಯೀಕರಣದ ಮೊತ್ತ ಹಾಗೂ ಮರುಪಾವತಿ ಸಾಮರ್ಥ್ಯದ ಆಧಾರದ ಮೇಲೆ ಸಾಲ ಮಂಜೂರು ಮಾಡಲಾಗುವುದು, ಯಾವುದೇ ರೀತಿಯ ಪ್ರಭಾವಗಳಿಗೆ ಒಳಗಾಗದೆ ಸಾಲದ ಗುಣಮಟ್ಟದ ಮೇಲೆ ಮಾಡಲಾಗುವುದೆಂದು ಸ್ಪಷ್ಟೀಕರಣ ನೀಡಿದರು.
- ಶ್ರೀ. ರಮಣಿ ಕೊಟ್ರೇಶಪ್ಪ, ಸದಸ್ಯತ್ವ ಸಂ. 916 ರವರು ಮಾತನಾಡುತ್ತಾ, ಪ್ರಸ್ತುತ ಸಹಕಾರಿಯಲ್ಲಿ ಬಹಳಷ್ಟು ನಿರ್ದೇಶಕರು 60 ವರ್ಷ ಮೇಲ್ಪಟ್ಟವರಿದ್ದು, ಮುಂದಿನ ದಿನಗಳಲ್ಲಿ ಯುವಕರಿಗೆ ಅಂದರೆ 40 ವರ್ಷದವರಿಗೆ ಅವಕಾಶ ಕಲ್ಪಿಸಿ ಕೊಡಬೇಕೆಂದು, ಅವರನ್ನು ಪ್ರಸ್ತುತವಿರುವ ಆಡಳಿತ ಮಂಡಳಿಯ ನಿರ್ದೇಶಕರಂತೆ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಲು ತರಭೇತಿ ನೀಡುವಂತೆ ತಿಳಿಸಿದರು. ಇದಕ್ಕೆ ಅಧ್ಯಕ್ಷರು ಸ್ಪಷ್ಟೀಕರಣ ನೀಡುತ್ತಾ, 50 ವರ್ಷದ ಕೆಳಗಿನ ನಿರ್ದೇಶಕರು ಸುಮಾರು 6 ಜನರಿದ್ದು, ಅವರಿಗೆ ಸಕ್ರೀಯವಾಗಿ ಪಾಲ್ಗೊಳ್ಳುವ ಅವಕಾಶ ನೀಡಲಾಗಿದೆ ಎಂದು ವಿವರಿಸಿದರು.
- ಶ್ರೀ ವೆಂಕಟೇಗೌಡ, ಎಮ್. ಸದಸ್ಯತ್ವ ಸಂ.426 ರವರು ಮಾತನಾಡುತ್ತಾ, ಸಹಕಾರಿಯನ್ನು ಶ್ರೀ ವಿ.ಬಿ. ಪಾಟೀಲರವರು ಬಹಳ ಸುಸೂತ್ರವಾಗಿ ನಡೆಸುತ್ತಿದ್ದಾರೆ, ಇದೇ ರೀತಿ ಮುಂದಿನ ದಿನಗಳಲ್ಲಿಯೂ ಯಶಸ್ವಿ ಪಥದತ್ತ ಸಾಗುವಂತೆ ಮಾಡಲು ಕೋರಿದರು.
- ಶ್ರೀ ಗುರಮಲ್ಲಯ್ಯ, ನಿವೃತ್ತ ಪ್ರಾಧ್ಯಾಪಕರು, ಬಿ.ಬಿ.ಎಂ.ಪಿ. ಕಾಲೇಜು, ಸದಸ್ಯತ್ವ ಸಂ.1071 ರವರು ಮಾತನಾಡುತ್ತಾ, ಇವರು "ಸ್ವಾಭಿಮಾನ" ಎಂಬ ಸಂಸ್ಥೆಯಲ್ಲಿ ಖಜಾಂಚಿಯಾಗಿದ್ದು, ನವಕಲ್ಯಾಣ ಸಹಕಾರಿಯು ಪ್ರಾರಂಭವಾಗುವ ಸಮಯದಲ್ಲಿ ತಮ್ಮ ಸಂಸ್ಥೆಯಿಂದ ಠೇವಣಿ ಕೊಟ್ಟಿದ್ದು, ಈ ಸಂಸ್ಥೆಯ ಪ್ರಾರಂಭದ ದಿನಗಳಲ್ಲಿ ಇದ್ದ ಅನುಮಾನವನ್ನು ಮೀರಿ ಯಾವುದೇ ರೀತಿಯಲ್ಲಿ ಇತರೆ ಬ್ಯಾಂಕುಗಳೊಡನೆ ಪೈಪೋಟಿ ನಡೆಸುವ ರೀತಿಯಲ್ಲಿ ವ್ಯವಹರಿಸಿ, ಸದಸ್ಯರ ತೊಂದರೆಗಳಿಗೆ / ಕಷ್ಟಗಳಿಗೆ ಆಸ್ಪದವಿಲ್ಲದ ರೀತಿಯಲ್ಲಿ ಈ ದಿನ ನಿಜಕ್ಕೂ ಅಚ್ಚರಿ ಮೂಡಿಸುವ ರೀತಿಯಲ್ಲಿ ವರ್ಷದಿಂದ ವರ್ಷಕ್ಕೆ ತಮ್ಮ ವ್ಯವಹಾರವನ್ನು ವೃದ್ಧಿಸುತ್ತಾ ಬಂದಿರುತ್ತಾರೆ. ಕೇವಲ ಬೆಂಗಳೂರಿನಲ್ಲಿಯೇ ಅಲ್ಲದೇ ಅಧ್ಯಕ್ಷರು ಹುಟ್ಟಿದ ರಾಯಚೂರು ಜಿಲ್ಲೆಯಲ್ಲಿಯೂ ಕೂಡ ಶಾಖೆಯನ್ನು ತೆರೆದು ಅಭಿವೃದ್ಧಿ ಮಾಡಿ ಅಲ್ಲಿಯ ಜನಗಳಿಗೂ ಕೂಡ ಆರ್ಥಿಕ ದೃಷ್ಟಿಕೋನ ಬೆಳೆಸಿರುವುದು ಹೆಮ್ಮೆಯ ವಿಚಾರ. ಸಹಕಾರಿಯ ಅಧ್ಯಕ್ಷರಾದ ಶ್ರೀ ವಿ.ಬಿ. ಪಾಟೀಲ್ ಮತ್ತುನಿರ್ದೇಶಕರಾದ ಶ್ರೀ ಬಸವಲಿಂಗಪ್ಪ ಶ್ಯಾವಂತಗೇರಿ ಹಾಗೂ ಆಡಳಿತ ಮಂಡಳಿಯವರು ಈ ಸಮಯದಲ್ಲಿ ಅಭಿನಂದನೆಗೆ ಅರ್ಹರು, ಇಷ್ಟೊಂದು ಸಾಧನೆ ಮಾಡಿರುವ ಇವರು ಶಿಖರಗಾಮಿಗಳೇ ಸರಿ, ಇಂತಹವರನ್ನು ನಮ್ಮ ಸಂಸ್ಥೆಯ ವತಿಯಿಂದ ಅಭಿನಂದಿಸಲು ನನಗೆ ಹೆಮ್ಮೆಯಾಗುತ್ತಿದೆ, "ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತದಿಂದ ಎತ್ತ ಸಂಬಂಧವಯ್ಯ", ಎಲ್ಲಿಯ ನವಕಲ್ಯಾಣ, ಎಲ್ಲಿಯ ಸ್ವಾಭಿಮಾನ ಸಂಸ್ಥೆ, ಇಲ್ಲಿ ಮಾಮರ – ಬ್ಯಾಂಕು,

ಕೋಗಿಲೆ – ಸ್ವಾಭಿಮಾನ ಸಂಸ್ಥೆ ಎಂದು ನುಡಿದು ಸಹಕಾರಿಯ ಸಾಧನೆಯ ಬಗ್ಗೆ ಸ್ಪಷ್ಟತೆ ನೀಡಿ ತಮ್ಮ ಮಾತುಗಳನ್ನು ಮುಗಿಸಿದರು.

